2003ರ ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ ಅಧಿನಿಯಮದ ಕಲಂ 89ನೇ ಪ್ರಕರಣದ ಮೇರೆಗೆ:

1) ಮಿಠಾಯಿಗಾರರನ್ನು ಹೊರತುಪಡಿಸಿ ಸಿಹಿ ಪದಾರ್ಥಗಳನ್ನೊಳಗೊಂಡಂತೆ ಬೇಕರಿ ಪದಾರ್ಥಗಳನ್ನು ಮಾರಾಟ ಮಾಡುವ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ಶೇ. 4ಕ್ಕೆ ನಿಗಧಿಪಡಿಸಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ: 5–7–2005ರಂದು ಹೊರಡಿಸಲಾದ ಎಫ್‌ಡಿ:169: ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆ.

2) ದಿನಾಂಕ : 18–4–2005ರ ಎಫ್‌ಡಿ:56:ಸಿ.ಎಸ್‌ಎಲ್:2005(1)ಕ್ಕೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ : 8–7–2005ರಂದು ಹೊರಡಿಸಲಾದ ಎಫ್‌ಡಿ:348 ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆ.

3) ದಿನಾಂಕ: 18–4–2005ರ ಎಫ್‌ಡಿ 56 :ಸಿಎಸ್‌ಎಲ್:2005(2) ಕ್ಕೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ: 8–7–2005ರಂದು ಹೊರಡಿಸಲಾದ ಎಫ್‌ಡಿ:348:ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆ.

4) ದಿನಾಂಕ: 18–4–2005ರ ಎಫ್‌ಡಿ 56 ಸಿಎಸ್‌ಎಲ್:2005(3) ಕ್ಕೆ ತಿದ್ದುಪಡಿ ಮಾಡಿ ತಕ್ಷಣದಿಂದ ಜಾರಿಗೆ ಬರುವಂತೆ ದಿನಾಂಕ: 8–7–2005ರಂದು ಹೊರಡಿಸಲಾದ ಎಫ್‌ಡಿ:348:ಸಿಎಸ್‌ಎಲ್:2005ನೇ ಸಂಖ್ಯೆಯ ಅಧಿಸೂಚನೆಗಳನ್ನು ಮಂಡಿಸುತ್ತೇನೆ.

. ಶ್ರೀ ಆರ್. ರಾಮಲಿಂಗ ರೆಡ್ಡಿ(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) ಮಾನ್ಯ ಅಧ್ಯಕ್ಷರೇ, 1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:

ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ಅನುಸೂಚಿ–2ಕ್ಕೆ ತಿದ್ದುಪಡಿ ಮಾಡಿ ಶಿಕ್ಷಣ ಇಲಾಖೆಯ ವಿವಿಧ ಸಂಸ್ಥೆಗಳ ಕಾರ್ಯ ಹಂಚಿಕೆ ಕುರಿತು ದಿನಾಂಕ: 3–6–2005ರಂದು ಹೊರಡಿಸಲಾದ ಡಿಪಿಎಆರ್:12:ಎಸ್‌ಡಿಇ:2004ನೇ ಸಂಖ್ಯೆಯ ಅಧಿಸೂಚನೆಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಕಾಗದ ಪತ್ರಗಳನ್ನು ಮಂಡಿಸಲಾಯಿತು.

5. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ : ರಾಜ್ಯದ ವಿವಿಧ ಪ್ರದೇಶಗಳಲ್ಲಿ ಅಧಿಕ ಮಳೆಯಿಂದ ಜಲಾವೃತಗೊಂಡಿರುವ ಹಳ್ಳಿಗಳಲ್ಲಿ ಮನೆ, ಬೆಳೆಹಾನಿ ಇತ್ಯಾದಿ ತೊಂದರೆ ಉಂಟಾಗಿರುವ ಬಗ್ಗೆ.

(ಗೊಂದಲ)

ಉಪಾಧ್ಯಾಕ್ಷರು : ಅವರು ಎರಡು ನಿಮಿಷದಲ್ಲಿ ಮುಗಿಸುತ್ತಾರೆ. ನೀವು ಕುಳಿತುಕೊಳ್ಳಿ. ಸುಮ್ಮನೆ ಟೈಮ್ ವೇಸ್ಟ್ ಮಾಡಬೇಡಿ.

ಶ್ರೀ ಗೋವಿಂದ ಮಕಟಪ್ಪ ಕಾರಜೋಳ (ಮುಧೋಳ್) : ಮಾನ್ಯ ಉಪಾಧ್ಯಕ್ಷರೇ, ನನ್ನ ಮತಕ್ಷೇತ್ರದ ಮುಧೋಳ್ ತಾಲ್ಲೂಕಿನಲ್ಲಿ ಘಟಪ್ರಭಾ ನದಿಗೆ ಪ್ರವಾಹ ಬಂದು ಸುಮಾರು ಐದು ಹಳ್ಳಿಗಳು ಇವತ್ತು ಜಲಾವೃತವಾಗಿವೆ. ನಡುಗಡೆಯಾಗಿಬಿಟ್ಟಿದೆ. ಜನಜೀವನ ಅಸ್ತವ್ಯಸ್ತವಾಗಿದೆ. ಆಸ್ತಿಪಾಸ್ತಿ ಹಾಳಾಗಿದೆ. ಮತ್ತು ಜನರ ಪ್ರಾಣ ಕೂಡ ಇವತ್ತು ಅಪಾಯದಲ್ಲಿದೆ. ಈ ಸಂದರ್ಭದಲ್ಲಿ ಸರ್ಕಾರ ಮುನ್ನೆಚ್ಚರಿಕೆಯ ಕ್ರಮವಾಗಿ ಏನು ಕ್ರಮವನ್ನು ತೆಗೆದುಕೊಳ್ಳಬೇಕಾಗಿತ್ತೋ ಅದನ್ನು ತೆಗೆದುಕೊಂಡಿಲ್ಲವೆಂದು ನಾನು ಬಹಳ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಇವತ್ತು ಇದು ಮೊದಲನೇ ಸಲ ಅಲ್ಲ. ಘಟಪ್ರಭಾನದಿಗೆ ಪ್ರವಾಹ ಬರತಕ್ಕಂಥದ್ದು. ಹಿಂದೆಯೂ ಕೂಡ ಸಾಕಷ್ಟು

ಸಾರಿ ಬಂದಿತ್ತು, ಅದಕ್ಕಾಗಿ ನಾನು ಹಿಂದಿನ ಅವಧಿಯಲ್ಲಿ ಈ ಸಭೆಯಲ್ಲಿ ಶಾಸಕನಾಗಿದ್ದು ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ವಿನಂತಿಯನ್ನು ಮಾಡಿಕೊಂಡಿದ್ದೆ. ಈ ಆಲಮಟ್ಟಿ ಜಲಾಶಯದ ಹಿನ್ನೀರಿನ ಸರ್ವೆ ಸರಿಯಾಗಿ ಆಗಿಲ್ಲ. ಆ ಹಿನ್ನೀರಿನ ಸರ್ವೆ ಸರಿಯಾಗಿ ಆಗದ ಕಾರಣಕ್ಕಾಗಿ ನನ್ನ ಮತಕ್ಷೇತ್ರದ ಸುಮಾರು ಒಂಭತ್ತು ಹಳ್ಳಿಗಳು ಪದೇ ಪದೇ ತೊಂದರೆಯಲ್ಲಿ ಸಿಲುಕಿಕೊಳ್ಳುತ್ತಿವೆ. ಯಾವಾಗ ನದಿಗೆ ನೀರು ಬರುತ್ತದೆ, ಆಗ ತೊಂದರೆಯಾಗುತ್ತದೆ. ಅದಕ್ಕೆ ನಾನು ಏನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆಂದರೆ ಇವತ್ತು ಘಟಪ್ರಭಾ ನದಿಯ ಬಲದಂಡೆ ಮತ್ತು ಎಡದಂಡೆಯಲ್ಲಿರತಕ್ಕಂಥ ಕಬ್ಬಿನ ಬೆಳೆ ಆಗಿರಬಹುದು, ಇನ್ನಿತರ ಬೆಳೆಯಾಗಿರಬಹುದು, ಸುಮಾರು ಹತ್ತು ಕೋಟಿ ರೂಪಾಯಿ ಇವತ್ತು ಹಾನಿಯಾಗಿದೆ. ಅದಲ್ಲದೇ ಇವತ್ತು ಮೂರು ಹಳ್ಳಿಗಳು ನೀರಿನಲ್ಲೇ ನಿಂತುಬಿಟ್ಟಿವೆ. ಇನ್ನು ಎರಡು ಹಳ್ಳಿಗಳು ಇವತ್ತು ಸಾಯಂಕಾಲದೊಳಗಾಗಿ ನೀರಿನಲ್ಲಿ ನಿಲ್ಲುವ ಪ್ರಸಂಗ ಇದೆ. ಸುಮಾರು ಐದು ಹಳ್ಳಿಗಳು ಇವತ್ತು ತೊಂದರೆಗೆ ಒಳಗಾಗಿವೆ. ಅದಕ್ಕೆ ನಾನು ಹಿಂದೆ ಸರ್ಕಾರಕ್ಕೆ ವಿನಂತಿಯನ್ನು ಮಾಡಿದ್ದೆ. ಆ ಹಳ್ಳಿಗಳನ್ನು ಶಾಶ್ವತವಾಗಿ ಸ್ಥಳಾಂತರ ಮಾಡಿ. ಅವರಿಗೇನೂ ಪರಿಹಾರವನ್ನು ಕೊಡಬೇಕಾಗಿಲ್ಲ. ನಾನೇನು ವಿನಂತಿಯನ್ನು ಮಾಡಿದ್ದೆ ಎಂದರೆ 30X40 ಸೈಟ್ ಮತ್ತು ಮಿನಿಮಮ್ ಮನೆ ಕಟ್ಟಿಕೊಳ್ಳುವುದಕ್ಕೆ 30 ರಿಂದ 40 ಸಾವಿರ ರೂಪಾಯಿಗಳನ್ನು ಪ್ರತಿ ಕುಟುಂಬಕ್ಕೆ ತಾವು ಕೊಟ್ಟರೆ ಆ ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಆಗುತ್ತದೆಂದು ಹೇಳಿದ್ದೆ. ಒಂದು ವೇಳೆ ತಮಗೆ ಸರ್ಕಾರದಲ್ಲಿ ಯಾವುದೇ ರೀತಿ ತೊಂದರೆ ಇದ್ದರೆ ಈ ಆಶ್ರಯ, ಅಂಬೇಡ್ಕರ್ ಇನ್ನಿತರ ಯೋಜನೆಗಳಲ್ಲಿ ಕೂಡ ಹೆಚ್ಚಿನ ಮನೆಗಳನ್ನು ಅಲಾಟ್ ಮೆಂಟ್ ಮಾಡಿ ಪ್ರತಿ ಹಳ್ಳಿಗೂ 200 ಮನೆಗಳನ್ನು ಅಲಾಟ್‌ಮೆಂಟ್ ಮಾಡಿಕೊಟ್ಟರೆ ಇವತ್ತು ಅಲ್ಲಿ ಜನರು ಶಿಫ್ಟ್ ಮಾಡಲಿಕ್ಕೆ ತಯಾರಿದ್ದಾರೆ. ಅದಕ್ಕಾಗಿ ನಾನೇನು ಸರ್ಕಾರಕ್ಕೆ ವಿನಂತಿಯನ್ನು ಮಾಡುತ್ತೇನೆ ಎಂದರೆ ಇವತ್ತು ತುರ್ತು ಪರಿಸ್ಥಿತಿಯೊಳಗೆ ಐದು ಹಳ್ಳಿಗಳನ್ನು ಸ್ಥಳಾಂತರ ಮಾಡುವುದಕ್ಕೆ ಐದು ಕೋಟಿ ರೂಪಾಯಿಗಳನ್ನಾದರೂ ಬಿಡುಗಡೆ ಮಾಡಬೇಕು. ಆ ರೀತಿ ಮಾಡಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಟ್ಟು ಆ ಜನರಿಗೆ ಅಲ್ಪಸ್ವಲ್ಪ ಮನೆಗಳನ್ನು ಕಟ್ಟಲಿಕ್ಕೆ ಹಣವನ್ನು ಕೊಡಬೇಕೆಂದು ಹೇಳಿ ವಿನಂತಿಯನ್ನು ಮಾಡುತ್ತೇನೆ. ಇದಲ್ಲದೇ ಇವತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಜಮಖಂಡಿ ತಾಲ್ಲೂಕು ಬೀಳಗಿ ತಾಲ್ಲೂಕು, ಬಾಗಲಕೋಟೆ ತಾಲ್ಲೂಕು, ಹುನಗುಂದ ತಾಲ್ಲೂಕಿನ ಹಳ್ಳಿಗಳು ಸಾಕಷ್ಟು ನೀರಿನಲ್ಲಿ ಮುಳುಗಡೆಯಾಗಿವೆ. ಇವತ್ತು ನಾರಾಯಣಪುರ ಡ್ಯಾಮ್ ಬಹಳ ಹಿಂದೆಯೇ ಕಂಪ್ಲೀಟ್ ಆದ್ದರಿಂದ ಅವರಿಗೆ ಕೊಟ್ಟಂಥ ಪರಿಹಾರದ ಮೊತ್ತ ನಮಗೂ ಮತ್ತು ಮಾನ್ಯ ಕಂದಾಯ ಸಚಿವರಿಗೂ ಕೂಡ ಗೊತ್ತಿದೆ. ಬಹಳ ಅಲ್ಪಸ್ವಲ್ಪ ಹಣವನ್ನು ಕೊಟ್ಟಿದ್ದಾರೆ. ಅವರು ಇವತ್ತು ಸ್ಥಳಾಂತರ ಮಾಡಲಿಕ್ಕೆ ಆಗಿಲ್ಲ. ಮತ್ತು ಅವರಿಗೆ ಸೈಟುಗಳನ್ನು ಕೂಡ ಹಿಂದಿನ ಅವಧಿಯಲ್ಲಿ ಸರಿಯಾಗಿ ಕೊಟ್ಟಿಲ್ಲ. ಅದಕ್ಕಾಗಿ ನಾನು ಸರ್ಕಾರಕ್ಕೇನು ಒತ್ತಾಯವನ್ನು ಮಾಡುತ್ತೇನೆಂದರೆ ನಾರಾಯಣಪುರ ಹಿನ್ನೀರಿನಲ್ಲಿ ಏನು ಜಲಾವೃತವಾದಂಥ ಮನೆಗಳಿಗೆ ಇನ್ನೊಂದು ಸಾರಿ ಸರ್ವೆ ಮಾಡಿಸಿ ಪರಿಹಾರವನ್ನು ಕೊಡುವುದು ಸೂಕ್ತ ಎಂದು ಹೇಳಿ ನಾನು ಒತ್ತಾಯ ಮಾಡುತ್ತೇನೆ. ಇವತ್ತು ಬೀಳಗಿ ತಾಲ್ಲೂಕು ಹಾಗೂ ಜಮಖಂಡಿ, ಹಾಗೂ ಬಾಗಲಕೋಟೆ ತಾಲ್ಲೂಕುಗಳಲ್ಲಿ ಏನು ಹಳ್ಳಿಗಳು ಮುಳುಗಡೆಯಾಗಿವೆ, ಅವರಿಗೆ ಕೆಲವರಿಗೆ ಪರಿಹಾರ ಸಿಕ್ಕಿದೆ. ಇನ್ನು ಕೆಲವರಿಗೆ ಸಿಕ್ಕಿಲ್ಲ. ಕೆಲವರಿಗೆ ಏಕೆ ಸಿಕ್ಕಿಲ್ಲವೆಂದರೆ 519.6 ಮೀಟರ್‌ಗೆ ನಾವು ಆಲಮಟ್ಟಿ ಜಲಾಶಯದಲ್ಲಿ ನೀರನ್ನು ನಿಲ್ಲಿಸಿದ್ದೇವೆ. ಆದರೆ ಇವತ್ತು ನೀರಿನ ಪ್ರಮಾಣವನ್ನು ನೋಡಿದರೆ

ಜಲಾಶಯದಲ್ಲಿ ಏನು 523 ಮೀಟರ್ ಹೈಟ್‌ಗೆ ನೀರು ನಿಲ್ಲಬೇಕಾಗಿತ್ತು. ಅಷ್ಟೊಂದು ನೀರು ಇವತ್ತು ನಿಂತಿದೆ. ಅದರಿಂದ ಮುಳುಗತಕ್ಕ ಹಳ್ಳಿಗಳು ಮತ್ತು ಆಸ್ತಿಪಾಸ್ತಿ ಬಹಳ ಹೆಚ್ಚಾಗಿದೆ. ಅದಕ್ಕಾಗಿ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ, ಈ ಮೊದಲು ಕೂಡ ಬಾಗಲಕೋಟೆಯಲ್ಲಿ ನಾವು ಹೋರಾಟವನ್ನು ಮಾಡಿದ್ದೇವೆ. ಆಗ ಕಂದಾಯ ಸಚಿವರು ಅವತ್ತು ಅಧಿಕಾರದಲ್ಲಿ ಇರಲಿಲ್ಲ. ಅವರೂ ಕೂಡ ಬಂದು ನಮಗೆ ಬೆಂಬಲ ಮಾಡಿದ್ದರು. 524 ಮೀಟರ್‌ವರೆಗೂ ಏನು ಸರ್ವೆ ಮಾಡಿರುವುದು ಇದೆ, ಅದಕ್ಕಾಗಿ ಇವತ್ತು ಕೂಡಲೇ ಪರಿಹಾರಧನವನ್ನು ಕೊಡಬೇಕೆಂದು ಹೇಳಿ ನಾನು ವಿನಂತಿ ಮಾಡುತ್ತೇನೆ. ಏಕೆಂದರೆ ಇದು ಪ್ರತಿವರ್ಷ ಆಗತಕ್ಕಂಥ ಸಮಸ್ಯೆ. ಇದು ಒಂದೇ ಸಲ ಆಗಿ ಹೋಗುವುದಿಲ್ಲ. ಅದಕ್ಕಾಗಿ 524 ರವರೆಗೂ ಏನು ಬಾಗಲಕೋಟೆ ಪಟ್ಟಣದಲ್ಲಿ ಆಗಿರಬಹುದು, ಇನ್ನುಳಿದ ಹಳ್ಳಿಗಳಲ್ಲಿ ಆಗಿರಬಹುದು. ನಾವೇನು ಸರ್ವೆ ಮಾಡಿದ್ದೇವೆ, ಅವುಗಳಿಗೆ ಪರಿಹಾರಧನವನ್ನು ಕೂಡಲೇ ಬಿಡುಗಡೆ ಮಾಡಬೇಕು. 638 ಕೋಟಿ ರೂಪಾಯಿಗಳ ಪರಿಹಾರದಲ್ಲಿ 400 ಕೋಟಿ ರೂಪಾಯಿಗಳನ್ನು ಪರಿಹಾರಕ್ಕಾಗಿಯೇ ತೆಗೆದಿರಿಸತಕ್ಕ ಹಣ. ಅದಕ್ಕಾಗಿ ಕೂಡಲೇ ಈ ಪರಿಹಾರದ ಹಣವನ್ನು ಕೊಡಬೇಕೆನ್ನುವುದು ಒಂದು. ಆಲಮಟ್ಟಿ ಹಿನ್ನೀರಿನಲ್ಲಿ ಸರ್ವೆ ಮಾಡತಕ್ಕದ್ದು ಸರಿಯಾಗಿ ಆಗಿಲ್ಲ, ಮುಧೋಳ್ ತಾಲ್ಲೂಕಿನ 9 ಹಳ್ಳಿಗಳಿಗೆ ಏನು ತೊಂದರೆ ಇದೆ, ಅವುಗಳನ್ನು ಕೂಡ ಇನ್ನೊಂದು ಸಾರಿ ಸರಿಯಾಗಿ ಸರ್ವೆ ಮಾಡಿಸಿ. ಏಕೆಂದರೆ ಮುಳುಗಡೆ ಆಗದಿದ್ದರೆ ನಾವು ಕೇಳುತ್ತಿರಲಿಲ್ಲ. ಇವತ್ತು ಆಲಮಟ್ಟಿ ಡ್ಯಾಮ್‌ನಲ್ಲಿ ನೀರಿನ ಪ್ರಮಾಣ ಹೆಚ್ಚಾದಾಗ ನಮ್ಮ ಹಳ್ಳಿಗಳಿಗೆ ತೊಂದರೆಯಾಗುತ್ತಿವೆ. ಅದಕ್ಕಾಗಿ ಇನ್ನೊಂದು ಸಾರಿ ಘಟಪ್ರಭಾ ನದಿಯಲ್ಲಿಬರತಕ್ಕ ಒಂಭತ್ತು ಹಳ್ಳಿಗಳನ್ನು ಇನ್ನೊಂದು ಸಾರಿ ಸರ್ವೆ ಮಾಡಿಸಿ ಅವರಿಗೂ ಕೂಡ ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಏನು ಪರಿಹಾರವನ್ನು ಕೊಟ್ಟಿದ್ದಾರೆ, ಅದೇ ಪರಿಹಾರದ ಮೊತ್ತವನ್ನು ಕೂಡ ಕೊಡಬೇಕೆಂದು ಹೇಳಿ ಒತ್ತಾಯವನ್ನು ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆಲ್ಕೋಡ್ ಹನುಮಂತಪ್ಪ(ದೇವದುರ್ಗ) : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಕಂದಾಯ ಸಚಿವರಲ್ಲಿ ನಾನು ರಾಯಚೂರು ಜಿಲ್ಲೆಯ ವಿಚಾರವನ್ನು ಪ್ರಸ್ತಾಪಮಾಡಿದ್ದೆ. ಎನಾಗಿದೆ, ನನ್ನ ಮತಕ್ಷೇತ್ರದಲ್ಲಿ ಬರತಕ್ಕ ಸುಮಾರು 8–10 ಹಳ್ಳಿಯ ಜನರು ಮಳೆಯ ನೀರಿನಿಂದ ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಇದರ ಬಗ್ಗೆ ಇವತ್ತು ಕೂಡ ಜಿಲ್ಲಾಧಿಕಾರಿಗಳ ಬಳಿ ಮಾತನಾಡಿದ್ದೇವೆ. ಮತ್ತು ತಾಲ್ಲೂಕಿನ ದಂಡಾಧಿಕಾರಿಗಳ ಹತ್ತಿರವೂ ಮಾತನಾಡಿದ್ದೇವೆ. ಅಲ್ಲಿನ ಜನರು ಬಹಳ ಕಷ್ಟದಲ್ಲಿದ್ದಾರೆ. ರಸ್ತೆ ಸಂಪರ್ಕ ಸಹಾ ಕಡಿದುಹೋಗಿದೆ. ಮನೆಗಳಿಗೆಲ್ಲಾ ನೀರು ನುಗ್ಗಿ ಜನ ಜಾನುವಾರುಗಳಿಗೂ ಕೂಡ ಬಹಳಷ್ಟು ತೊಂದರೆಯಾಗಿದೆ. ಮತ್ತು ಬಹಳಷ್ಟು ಮನೆಗಳೂ ಕೂಡ ಕುಸಿದು ಬಿದ್ದಿರುವುದು ಇವತ್ತು ನನ್ನ ಗಮನಕ್ಕೆ ಬಂದಿದೆ. ಅದಕ್ಕೆ ನಾನು ಮಾನ್ಯ ಕಂದಾಯ ಸಚಿವರಲ್ಲಿ ಇಷ್ಟೇ ಮನವಿ ಮಾಡಿಕೊಳ್ಳುತ್ತೇನೆ, ನನ್ನ ಮತಕ್ಷೇತ್ರದಲ್ಲಿರುವ ಸುಮಾರು ವೀರುಗೊಂಡ. ಬುಂಕುಲ ದೊಡ್ಡಿ, ನಿಲುವಂಜಿ, ಸುಮಾರು ಹತ್ತು ಹದಿನೈದು ಹಳ್ಳಿಗಳು ನೀರಿನಲ್ಲಿ ಆವರಿಸಿಕೊಂಡಿವೆ ಎನ್ನತಕ್ಕದ್ದನ್ನು ನನ್ನ ಗಮನಕ್ಕೆ ಬಂದಿದೆ. ಅದಕ್ಕಾಗಿ ಸರ್ಕಾರ ಇದರ ಸಹಾಯಕ್ಕೆ ಬರಬೇಕೆಂದು ಹೇಳಿ ತಮ್ಮ ಮುಖಾಂತರ ನಾನು ಕಂದಾಯ ಸಚಿವರಲ್ಲಿ ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಮುರುಗೇಶ್ ರುದ್ರಪ್ಪ ನಿರಾನಿ (ಬೀಳಗಿ) : ಮಾನ್ಯ ಉಪಾಧ್ಯಕ್ಷರೇ, ಆಲಮಟ್ಟಿ ಹಿನ್ನೀರಿನಿಂದ ಬೀಳಗಿ ತಾಲ್ಲೂಕಿನಲ್ಲಿ 55 ಹಳ್ಳಿಗಳು ಅತಿ ಹೆಚ್ಚು ಸಬ್‌ಮರ್ಜ್ ಆಗಿರುವಂಥದ್ದು. ಅದರಲ್ಲಿ ಈಗಾಗಲೇ ಬೀಳಗಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ 14 ಹಳ್ಳಿಗಳು ನೀರಿನಿಂದ

ಜಲಾವೃತಗೊಂಡಿವೆ. ಆದರೆ ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರ ಕೊಡುವಾಗ ಹೇಳಿದ ಪ್ರಕಾರ ಹತ್ತು ಬೋಟುಗಳನ್ನು ಅಲ್ಲಿಗೆ ಕಳುಹಿಸಿದ್ದೇವೆ ಎನ್ನುವಂಥ ಒಂದು ಸುದ್ದಿಯನ್ನು ಇಲ್ಲಿ ಹೇಳಿದರು. ಆದರೆ ಇಲ್ಲಿಯವರೆಗೂ ಕೇವಲ ಎರಡು ನಾವೆಗಳು ಮಾತ್ರ ಮುಟ್ಟಿವೆ. ಇಲ್ಲಿಯವರೆಗೆ ಯಾವುದೇ ರೀತಿಯಿಂದ ಫುಡ್‌ಗ್ರೈನ್ ಆಗಲಿ, ಅಥವಾ ದನಕರುಗಳಿಗೆ ಫಾಡರ್ ಆಗಲಿ, ಮುಟ್ಟಿರುವುದಿಲ್ಲ. ಅದರ ಸಲುವಾಗಿ ಅಲ್ಲಿ ಜಿಲ್ಲೆಯಲ್ಲಿ ಬರತಕ್ಕ ಹಿರಿಯ ಅಧಿಕಾರಿಗಳಾಗಲಿ, ಅಲ್ಲಿ ಮುಳುಗಡೆಯಾಗಿರುವ ಸಂತ್ರಸ್ಥರಿಗೆ ಏನು ನಿಜವಾದ ಸಮಸ್ಯೆ ಇದೆ. ಸಂತ್ರಸ್ಥರ ಸಮಸ್ಯೆಗಳ ಬಗ್ಗೆ ಸ್ಪಂದನವನ್ನು ಮಾಡುತ್ತಿಲ್ಲ. ಅದರ ಸಲುವಾಗಿ ಅತಿ ಹೆಚ್ಚು ಜಲಾವೃತಗೊಂಡಿರುವ ಆ ಹಳ್ಳಿಗಳ ಸಮಸ್ಯೆಯನ್ನು ನಿವಾರಣೆ ಮಾಡಲಿಕ್ಕೆ ಸಾಧ್ಯವಾದಷ್ಟು ಬೇಗನೆ ಹೆಚ್ಚಿನ ಬೋಟುಗಳನ್ನು ಕೊಡಬೇಕು. ಕೇವಲ ಒಂದು ಹೆಲಿಕಾಪ್ಟರ್ ಇಡೀ ಬಾಗಲಕೋಟೆ, ಬಿಜಾಪುರ, ಬೆಳಗಾಂ ಜಿಲ್ಲೆಗಳಿಗೆ ಸಾಕಾಗುವುದಿಲ್ಲ. ಅತೀ ಹೆಚ್ಚಿನ ಸಂಖ್ಯೆಯಲ್ಲಿ ನೀರಿನಲ್ಲಿ ಹಳ್ಳಿಗಳು ಜಲಾವೃತವಾಗಿರುವುದರಿಂದ ಕನಿಷ್ಟ ಅಲ್ಲಿಗೆ ನಾಲ್ಕೈದು ಹೆಲಿಕಾಪ್ಟರ್‌ಗಳನ್ನಾದರೂ ಕಳುಹಿಸಬೇಕೆಂದು ತಮ್ಮ ಮುಖಾಮತರ ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಅದರ ಜೊತೆಗೆ ಬಾಗಲಕೋಟೆ ಪಟ್ಟಣಕ್ಕೆ ಸೀಮಿತವಾಗಿರುವ ಈ ಪ್ಯಾಕೇಜನ್ನು ಗ್ರಾಮ ಮಟ್ಟಕ್ಕೂ ಸಹಿತ ಕೊಡಬೇಕೆಂದು ವಿನಂತಿ ಮಾಡುತ್ತಾ ಬಾಗಲಕೋಟೆ ಆಲಮಟ್ಟಿ ಹಿನ್ನೀರಿನಿಂದ 519.6 ಮೀಟರ್‌ರವರಗೆ ಪರಿಹಾರ ಹಣವನ್ನು ಕೊಟ್ಟಿದ್ದಾರೆ. ಈಗಾಗಲೇ ಅಲ್ಲಿ 523 ಮೀಟರ್‌ವರೆಗೆ ನೀರು ನಿಂತಿದ.ಎ 3.6 ಮೀಟರ್ ಹೆಚ್ಚಿನ ನೀರು ಅಲ್ಲಿ ಕನಿಷ್ಟ ಪಕ್ಷ 50 ಕೋಟಿ ರೂವರೆಗೆ ನಷ್ಟವಾಗಿದೆ. ಅದನ್ನೂ ಕೂಡ ಬೇಗನೆ ಕೊಡಬೇಕಾದ ಬಗ್ಗೆ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಸಿ.ಎಂ. ಉದಾಸಿ(ಹಾನ್‌ಗಲ್) : ಮಾನ್ಯ ಉಪಾಧ್ಯಕ್ಷರೇ, ಹಾವೇರಿ ಜಿಲ್ಲೆಯಲ್ಲಿ ಹಾನ್‌ಗಲ್ ತಾಲ್ಲೂಕು ಮತ್ತು ಸವಣೂರು ಮತ್ತು ಹಾವೇರಿ ತಾಲ್ಲೂಕುಗಳಲ್ಲಿ ವರದಾನದಿ ಹರಿದು ಹೋಗುತ್ತಿದ್ದು ಈಗ ಮಹಾಪೂರ ಬಂದಿರುವುದರಿಂದ ಬಹಳಷ್ಟು ಹಾನಿಯಾಗಿದೆ. ಬಹಳಷ್ಟು ಹಾನಿಯಾಗಿದೆ ಎಂದರೆ ಹಾನಗಲ್ ತಾಲ್ಲೂಕು ಒಂದರಲ್ಲೇ ನಾಲ್ಕೈದು ಸಾವಿರ ಎಕರೆಗಿಂತ ಹೆಚ್ಚು ಬೆಳೆ ನಾಶವಾಗಿದೆ. ಅದರ ಜೊತೆಗೆ ಹಾವೇರಿ ತಾಲ್ಲೂಕಿನಲ್ಲಿ ಹತ್ತು ಸಾವಿರಕ್ಕಿಂತ ಹೆಚ್ಚು ಬೆಳೆ ಹಾನಿ ಆಗಿದೆ. ಇದರ ಜೊತೆಗೆ ಎಂದರೆ ಈ ವರ್ಷ ಎಂದೂ ಕಾಣದಂತಹ ಬೆಳೆ ಹಾನಿ ಗೋವಿನ ಜೋಳ ಬೆಳೆಯುತ್ತಿರುವಂತಹ ಹಾನಗಲ್ ತಾಲ್ಲೂಕಿನಲ್ಲಿ ಆಗಿದೆ. ಮೊದಲ ಬಾರಿಗೆ ಇಷ್ಟೊಂದು ವಿಪರೀತ ಮಳೆ ಆಗಿರುವುದರಿಂದ 25 ಸಾವಿರ ಎಕರೆಗಿಂತ ಹೆಚ್ಚು ಗೋವಿನ ಜೋಳದ ಬೆಳೆ ಹಾನಿ ಆಗಿರುವುದರಿಂದ ಪರ್ಯಾಯ ಬೆಳೆ ಮಾಡಬೇಕಾದಂತಹ ಪರಿಸ್ಥಿತಿ ಉದ್ಭವ ಆಗಿದೆ. ರೈತರು ಅತ್ಯಂತ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಕಳೆದ ಆರು ವರ್ಷಗಳಿಂದ ಒಂದು ಧರ್ಮಾ ಜಲಾಶಯ ತುಂಬದೇ ಇರುವಂತಹದು, ತುಂಬಿ ಹರಿಯುತ್ತಿರುವುದರಿಂದ ಇವತ್ತು ಅಲ್ಲಿ ಧರ್ಮಾ ಕಾಲುವೆಗಳ ಬಗ್ಗೆ ಸರಿಯಾದ ರಿಪೇರಿ ಸಮಯಕ್ಕೆ ಸರಿಯಾಗಿ ಮಾಡದೇ ಇರುವುದರಿಂದ ಸುಮಾರು 22,000 ಎಕರೆ ನೀರಾವರಿ ಆಗುವಂತಹ ಪ್ರದೇಶದಲ್ಲಿ ಬರತಕ್ಕ ಈ ಕಾಲುವೆ ನಾಲ್ಕೈದು ಕಡೆ ಒಡದು ಹೋಗಿದೆ. ಒಡೆದು ಹೋಗಿರುವುದರಿಂದ ಹಿಂದಿನ ದಿವಸ ತಾವು ತಹಸೀಲ್ದಾರ್ ಜೊತೆಗೆ ಹೋಗಿ ನೋಡಿಕೊಂಡು ಬಂದಿದ್ದೇವೆ. ಒಂದು ವೇಳೆ ಅದನ್ನು ರಿಪೇರಿ ಮಾಡದೇ ಇದ್ದರೆ ಸುಮಾರು 22 ಸಾವಿರ ಎಕರೆಗೆ ನೀರು ಹಾಯುವುದನ್ನೆಲ್ಲಾ ಸಂಪೂರ್ಣವಾಗಿ ಬಂದ್ ಮಾಡಬೇಕಾದಂತಹ ಪರಿಸ್ಥಿತಿ ನಿರ್ಮಾಣ ಆಗಿದೆ. ಅನೇಕ ಕೆರೆಗಳು ಒಡೆದು ಹೋಗಿದೆ. ಆ ಕಾರಣದಿಂದ ಇದಕ್ಕೆ ತುರ್ತಾಗಿ ಹಣ ಬಿಡುಗಡೆ ಮಾಡಬೇಕು. ಮನೆಗಳು ಬಿದ್ದಿದ್ದಕ್ಕೆ ಇವತ್ತು ಪರಿಹಾರ

ದೊರೆಯಬೇಕು. ಮತ್ತು ಬೆಳೆ ಹಾನಿಗೆ ಪರಿಹಾರ ದೊರೆಯಬೇಕು. ಇವತ್ತೇನು ಕಾಲುವೆ ದುರಸ್ತಿ ಮಾಡಬೇಕಾದಂತಹ ಕೆಲಸವನ್ನು ಶೀಘ್ರಗತಿಯಲ್ಲಿ ಮಾಡದೇ ಇದ್ದರೆ ಇವತ್ತು 22,000 ಎಕರೆ ನೀರಾವರಿಯನ್ನು ಹೊಂದಿರುವಂಥಹ ರೈತರು ವಂಚಿತರಾಗುವಂತಹ ಸಂದರ್ಭ ಇದೆ. ಅದರಿಂದ ಈ ಕೂಡಲೇ ಮಾಡಬೇಕಾದಂತಹ ಕೆಲಸಕ್ಕೆ ಸನ್ಮಾನ್ಯ ಸಚಿವರು ಹಣ ಬಿಡುಗಡೆ ಮಾಡಿಸಬೇಕೆಂದು ಕೋರುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :ಮಾನ್ಯ ಅಧ್ಯಕ್ಷರೆ.

ಶ್ರೀ ಸಿದ್ದು ಸವದಿ : ಮಾನ್ಯ ಅಧ್ಯಕ್ಷರೆ, ಸುಮಾರು 21 ಹಳ್ಳಿಗಳು. ಮುಳುಗಿವೆ ನನಗೆ ಮೊದಲು ಅವಕಾಶ ಕೊಟ್ಟಿದ್ದಾರೆ. ಎಲ್ಲರೂ ಮಾತನಾಡಿ ನಾವೇ ಮಾತನಾಡಲಾರದ ಪರಿಸ್ಥಿತಿ ಬಂದಿದೆ. 21 ಹಳ್ಳಿ ಮುಳುಗಿ ನಮ್ಮ ಜನ ಅಲ್ಲಿ ಸಾಯಲಿಕ್ಕೆ ಹತ್ತಿದ್ದಾರೆ. ಅಲ್ಲಿ ಸ್ಪಂದಿಸುವಂತಹ ವ್ಯವಸ್ಥೆ ಇಲ್ಲ. ಮಾತನಾಡಲಿಕ್ಕೂ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ? ಇದನ್ನು ನಾನು ಪ್ರತಿಭಟನೆ ಮಾಡಿ ಧರಣಿ ಕುಳಿತುಕೊಳ್ಳುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಸಿದ್ದು ಸವದಿ ಅವರು ಬಾವಿಗೆ ಬಂದರು)

(ಗೊಂದಲ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಕೃಷಿ ಸಚಿವರೂ ಕೂಡ ಸ್ಥಳಕ್ಕೆ ಭೇಟಿ ಕೊಟ್ಟಿದ್ದರು. ನಾನು ಅವರು ಇಬ್ಬರೂ ಆ ಹಳ್ಳಿಗಳಿಗೆ ಹೋಗಿದ್ದೆವು. ವಿಚಿತ್ರ ಪರಿಸ್ಥಿತಿ ಇದೆ. ಬೇರೆ ಎಲ್ಲೂ ನಮ್ಮ ತಾಲ್ಲೂಕಿನಲ್ಲಿ ಮಳೆ ಅಗಿಲ್ಲ. ಎರಡೇ ಎರಡು ಹಳ್ಳಿಗಳಲ್ಲಿ ವಿಪರೀತ ಮಳೆ ಮಳೆ ಬಿದ್ದು ಸುಮಾರು ಜಮೀನೆಲ್ಲಾ ಕೊಚ್ಚಿಕೊಂಡು ಹೋಗಿ ಬಿಟ್ಟಿದೆ. ಬೆಳೆ ನಾಶ ಆಗಿ ಬಿಟ್ಟಿದೆ. ಮನೆಗಳು ಬಿದ್ದು ಹೋಗಿ ಬಿಟ್ಟಿದೆ. ಬೆಳೆ ಮತ್ತು ಭೂಮಿ ಕೊಚ್ಚಿಕೊಂಡು ಹೋಗಿಬಿಟ್ಟಿದೆ. ಬೆಳೆ ನಾಶ ಆಗಿ ಬಿಟ್ಟಿದೆ, ಮನೆಗಳು ಬಿದ್ದು ಹೋಗಿದೆ. ಜಾನುವಾರುಗಳು ಸತ್ತಿವೆ. ಮಾನ್ಯ ಕೃಷಿ ಸಚಿವರೂ ಕೂಡ ಸ್ಥಳಕ್ಕೆ ಬಂದಿದ್ದರು. ನಾನು ಹೋಗಿದ್ದೆ. ದಯವಿಟ್ಟು ಅದಕ್ಕೆ ತಕ್ಷಣ ಪರಿಹಾರ ಕೊಡಬೇಕು. ಅವತ್ತು 1000–1200 ರೂಪಾಯಿ ಅಷ್ಟೇ ಪರಿಹಾರ ಕೊಟ್ಟಿದ್ದು. ತಕ್ಷಣ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಆ ಬೆಳೆ ನಷ್ಟ ಆಗಿರತಕ್ಕದ್ದು ಮತ್ತು ಭೂಮಿ ಕೊಚ್ಚಿಕೊಂಡು ಹೋಗಿರತಕ್ಕದ್ದು ಹಾಗೂ ಮನೆಗಳಿಗೆ ಪರಿಹಾರ ಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರಲ್ಲಿ ಕೇಳುತ್ತಿದ್ದೇನೆ.

ಉಪಾಧ್ಯಕ್ಷರು : ಮಾನ್ಯ ಸಿದ್ದು ಸವದಿ ಅವರೇ, ನಿಮ್ಮ ಸ್ಥಳಕ್ಕೆ ಹೋಗಿ. ಅವಕಾಶ ಕೊಡುತ್ತೇವೆ. ಮಾತನಾಡಬಾರದು ಎಂದು ಹೇಳಿದ್ದೇರಾ?

(ಮಾನ್ಯ ಸದಸ್ಯರಾದ ಶ್ರೀ ಸಿದ್ದು ಸವದಿ ಅವರು ಬಾವಿಯಿಂದ ಮಾತನಾಡುತ್ತಿದ್ದರು)

ಶ್ರೀ ಗೋವಿಂದ ಎಂ ಕಾರಜೋಳ್ : ಹಳ್ಳಿಗಳೆಲ್ಲಾ ಮುಳುಗಡೆ ಆಗಿ ಜನ ಇವತ್ತು ಸಾಯುತ್ತಿದ್ದಾರೆ.

ಉಪಾಧ್ಯಕ್ಷರು : ಮಾನ್ಯ ಕಾರಜೋಳ್ ಅವರೇ, ನೀವು ಧರ್ಮವಾಗಿ ಈಗ ಯೋಚನೆ ಮಾಡಿ.

ಶ್ರೀ ಗೋವಿಂದ ಎಂ ಕಾರಜೋಳ್ : ಔಷಧಿ ಇಲ್ಲದೆ ಜನ ಸಾಯುತ್ತಿದ್ದಾರೆ. ಇವತ್ತು ಅಥಣಿ ತಾಲ್ಲೂಕಿನಲ್ಲಿ ಔಷಧೋಪಚಾರ ಕೂಡ ಆಗಿಲ್ಲ.

ಉಪಾಧ್ಯಕ್ಷರು : ಈ ತರಹ ಮತ್ತೆ ನೀವು ಟೈಮ್ ವೇಸ್ಟ್ ಮಾಡುತ್ತಿದ್ದೀರಿ.

ಶ್ರೀ ಗೋವಿಂದ ಎಂ ಕಾರಜೋಳ್ : ದಯಮಾಡಿ ತಾವು ಗಂಭೀರವಾಗಿ ಯೋಚನೆ ಮಾಡಬೇಕಾಗುತ್ತದೆ. ಔಷಧೋಪಚಾರ ಸಿಗಲಾರದ ಕಾರಣಕ್ಕಾಗಿ ಇಬ್ಬರು ಹೆಣ್ಣು ಮಕ್ಕಳು ಸತ್ತಿದ್ದಾರೆ.

ಒಬ್ಬರು ಲಕ್ಷಮ್ಮ ಬಾಯಿ ದಿಕ್ಕೇವಾಡಿ ಹಾಗೂ ರಕ್ಷೀದಾ ಎಂಬ ಇಬ್ಬರು ಹೆಣ್ಣು ಮಕ್ಕಳು ಸತ್ತಿದ್ದಾರೆ. ಇದರ ಬಗ್ಗೆ ಕೂಡ ಸರ್ಕಾರ ಗಂಭೀರವಾಗಿ ತೆಗೆದುಕೊಳ್ಳಬೇಕು.

ಉಪಾಧ್ಯಕ್ಷರು : ನೀವು ಮಾತನಾಡಿದ್ದೀರಲ್ಲಾ.

ಶ್ರೀ ಗೋವಿಂದ ಎಂ ಕಾರಜೋಳ್ : ಗಂಭೀರವಾಗಿ ಯೋಚನೆ ಮಾಡಬೇಕು. ಏಕೆಂದರೆ ಉಳಿದ ವಿಷಯ ಇದ್ದೇ ಇರುತ್ತದೆ. ಕೋಲಾರದಲ್ಲಿ ಅಷ್ಟು ಸಮಸ್ಯೆ ಇರುವುದಿಲ್ಲ.

ಉಪಾಧ್ಯಕ್ಷರು : ಮಾನ್ಯ ನಿರಾನಿ ಅವರು ಮಾತನಾಡಿದ್ದರಲ್ಲಾ. ಅವರೇಕೆ ಬಾವಿಗೆ ಬಂದರು?

ಶ್ರೀ ಗೋವಿಂದ ಎಂ ಕಾರಜೋಳ್ : ಇವತ್ತು ನಮಗೆ ಅವಕಾಶ ಮಾಡಿಕೊಡಿ. ಒಂದು ಸ್ವಲ್ಪ ಎಲ್ಲರನ್ನೂ ಬಿಡಿಸಿರಿ. ಇವರಿಗೆ ಅವಕಾಶ ಮಾಡಿಕೊಡಿರಿ. ಬಾಗಲಕೋಟೆ ಜಿಲ್ಲೆಯವರಿಗೆ ಹಾಗೂ ಬೆಳಗಾಂ ಜಿಲ್ಲೆಯವರಿಗೆ ಅವಕಾಶ ಮಾಡಿಕೊಡಿ. ಕೃಷ್ಣಾ ನದಿ, ಮಲಪ್ರಭಾ ಮತ್ತು ಭೀಮಾನದಿ ದಂಡೆಯವರಿಗೆ ಮೊದಲು ಅವಕಾಶ ಮಾಡಿಕೊಡಬೇಕಾಗುತ್ತದೆ. ಅವಕಾಶ ಮಾಡಿಕೊಡದೇ ಇದ್ದರೆ ಇಲ್ಲಿಗೆ ಬಂದು ಏನು ಮಾಡುವುದು? ಅಲ್ಲಿ ಜನ ಸಾಯುತ್ತಾರೆ. ಇಲ್ಲಿ ಬಂದು ಒಂದು ಪ್ರಸ್ತಾಪ ಮಾಡಲಿಕ್ಕೆ ಕೂಡ ಆಗದೇ ಇದ್ದರೆ ನಮ್ಮ ಶಾಸಕರು ಏನು ಮಾಡಬೇಕು? ಏತಕ್ಕಾಗಿ ಆರಿಸಿ ಬಂದಿದ್ದಾರೆ?

(ಗೊಂದಲ)

ಮಾನ್ಯ ಸದಸ್ಯರು : ಹಾವೇರಿ ಜಿಲ್ಲೆಯವರಿಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ವಿರೋಧ ಪಕ್ಷದ ನಾಯಕರು ಬಾಗಲಕೋಟೆ ಬಗ್ಗೆ ನಿಲುವಳಿ ಸೂಚನೆ ಕೊಟ್ಟಿದ್ದಾರೆ.

ಉಪಾಧ್ಯಕ್ಷರು : ನೀವು ಸೀಟಿಗೆ ಹೋಗಿ.

ಶ್ರೀ ಧರ್ಮಸಿಂಗ್ : ಬಾಗಲಕೋಟೆ ಸಂತ್ರಸ್ಥರಿಗೆ ಪರಿಹಾರ ಕೊಡತಕ್ಕಂಥ ರೀತಿಯಲ್ಲಿ ಒಂದು ಸಭೆ, ಮಾಡಿದ್ದೇವೆ. ಅದರ ಬಗ್ಗೆ ಏನೂ ಆಗಿಲ್ಲ ಎಂದು ಹೇಳಿ ನಿಲುವಳಿ ಸೂಚನೆ ತಂದಿದ್ದಾರೆ. ಅದನ್ನೂ ಮತ್ತೆ ತೆಗೆದುಕೊಳ್ಳಬಹುದು. ನಾವ್ಯಾಕೆ ಮೊದಲು ಪ್ರಸ್ತಾಪ ಮಾಡಿದೆವು ಎಂದರೆ ಈಗೇನು ನಡೆಯುತ್ತಿದೆ. ಸಂತ್ರಸ್ಥರಿಗೆ ಇವತ್ತು ಏನು ತೊಂದರೆ ಆಗಿದೇ, ಅದರ ಬಗ್ಗೆ ವಿವರ ಕೊಡಬೇಕು ಎನ್ನತಕ್ಕದ್ದು. ಸದನ ನಡೆಯತಕ್ಕ ಕಾಲದಲ್ಲಿ ರಾಜ್ಯದಲ್ಲಿ ಏನು ಅನಾಹುತ ಆಗಿದೆ, ಇಲ್ಲಿಂದ ರಾಜ್ಯದ ಜನತೆಗೆ ಮಾಹಿತಿ ಒದಗಿಸಿಕೊಡಬೇಕಾಗುತ್ತದೆ. ಅದರ ಬಗ್ಗೆ ತಾವೂ ಕೂಡ ಮಾತನಾಡಿದ್ದೀರಿ. ಸುದೀರ್ಘವಾದಂತಹ ಉತ್ತರವನ್ನು ಇವತ್ತು ಮಾನ್ಯ ಕಂದಾಯ ಸಚಿವರು ಕೊಟ್ಟಿದ್ದಾರೆ. ಇದರ ಬಗ್ಗೆ ಸಂಬಂಧಪಟ್ಟಂತಹ ಶಾಸಕರೂ ಕೂಡ ಇನ್ನೂ ಏನು ಕೆಲಸ ಆಗಬೇಕಾಗಿದೆ ಎನ್ನತಕ್ಕ ರೀತಿಯಲ್ಲಿ ಚರ್ಚೆ ಮಾಡುತ್ತಿದ್ದಾರೆ. ಅದಾದ ಮೇಲೆ ಇವತ್ತು ಬೇರೆ ಒಂದು ಬೆಲೆ ಬರುತ್ತದೆ ಅದರ ಬಗ್ಗೆನೂ ಕೂಡ ಚರ್ಚೆ ಆಗುತ್ತದೆ. ಮತ್ತು ಕೊನೆಯದಾಗಿ ನಿಲುವಳಿ ಸೂಚನೆ ಬಗ್ಗೆ ಯಾವ ರೀತಿ ತಾವು ಅವಕಾಶ ಮಾಡುತ್ತೀರಿ? ಅದರ ಬಗ್ಗೆ ಚರ್ಚೆ ಆಗಲಿ. ನನಗೆ ಅನ್ನಿಸುತ್ತದೆ. ಇನ್ನು ಕೂಡ ಶಾಸಕರ ಮನಸ್ಸಿನಲ್ಲಿ ತಮ್ಮ ಕ್ಷೇತ್ರದಲ್ಲಿ ಏನಾಗಿದೆ ಅದರ ಬಗ್ಗೆ ವಿಚಾರ ಇದ್ದರೆ ಅದನ್ನು ಕೇಳಿ. ನಾವು ಉತ್ತರ ಕೊಡುತ್ತೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೆ, ಈ ಒಂದು ಪ್ರವಾಹದಿಂದ ಅನಾಹುತ ಇಡೀ ರಾಜ್ಯದಲ್ಲಿ ಆಗಿದೆ. ಬಹಳ ದೊಡ್ಡ ಪ್ರಮಾಣದಲ್ಲಿ ಬೆಳಗಾಂ ಹಾಗೂ ಬಾಗಲಕೋಟೆ ಜಿಲ್ಲೆಯಲ್ಲಿನ ಅನೇಕ ತಾಲ್ಲೂಕುಗಳಲ್ಲಿ ಹತ್ತಾರು ಹಳ್ಳಿಗಳು, ಮುಳುಗಿ ಹೋಗಿದೆ. ಹಳ್ಳಿಗಳಿಂದ ಹೆಲಿಕಾಪ್ಟರ್ ಮೂಲಕ ಅವರನ್ನು ಶಿಫ್ಟ್ ಮಾಡುವ ದಾರುಣ ಪರಿಸ್ಥಿತಿ ಇದೆ. ಈಗಾಗಲೇ ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ. ಇಲ್ಲಿ ಪ್ರಸ್ತಾಪ ಆಗುತ್ತಿರುವುದು ಏನೂ ಬಾಗಲಕೋಟೆಯಲ್ಲಿ

ಆಗಿರುವಂತಹ ಈ ಅನಾಹುತದ ಬಗ್ಗೆ ಮಾತನಾಡಲು ಸ್ವಲ್ಪ ಅವಕಾಶ ಮಾಡಿಕೊಡಿ ಎಂದು ಪ್ರಸ್ತಾಪ ಆಗುತ್ತಿರುವುದು. ನಾನು ಎದ್ದು ನಿಂತು ಬಾಗಲಕೋಟೆ ಪ್ಯಾಕೇಜ್ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ಕಳೆದ 5–6 ದಿವಸದಿಂದ ತರುವುದಕ್ಕೆ ಪ್ರಯತ್ನ ಮಾಡಿದೆ. ಪ್ರಯತ್ನ ಮಾಡಿ ಬಜೆಟ್ ಒಂದು ಸಾರಿ ಪಾಸ್ ಆಗಲಿ ಎನ್ನುವ ದೃಷ್ಟಿಯಿಂದ ನಾನು ಸೂಚನೆ ಕೊಟ್ಟು ಮತ್ತೆ ಸಮಾಧಾನವಾಗಿ ವಾಪಸ್ ತೆಗೆದುಕೊಳ್ಳುತ್ತಿದ್ದೇವೆ. ಇವತ್ತು ನೀವು ನಿಗದಿ ಮಾಡಿ. ಬಾಗಲಕೋಟೆ ಪ್ಯಾಕೇಜ್ ಎಂದು 638 ಕೋಟಿ ರೂಪಾಯಿ ಘೋಷಣೆ ಮಾಡಿ ಮೂರು ವರ್ಷ ಆಯಿತು. ಸನ್ಮಾನ್ಯ ಮುಖ್ಯ ಮಂತ್ರಿಗಳೇ. ಅದಕ್ಕೆ ಬಾಗಲಕೋಟೆ ಪ್ಯಾಕೇಜ್ ಬಗ್ಗೆ ನಾವು ನಿಲುವಳಿ ಸೂಚನೆ ಮೂಲಕ ಚರ್ಚೆ ಮಾಡಬೇಕು. ತಾವು ಸಮಯ ನಿಗದಿ ಮಾಡಿ ಅದನ್ನು ಯಾವ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳುತ್ತೀರಿ ಎನ್ನುವುದು ಮುಖ್ಯವಲ್ಲ. ಕಳೆದ 5–6 ದಿವಸದಿಂದ ಬಜೆಟ್ ಒಂದು ಸಾರಿ ಪಾಸ್ ಆಗಲಿ ಎಂದು ಹೇಳಿ ನಾವು ಶಾಂತವಾಗಿ ಸಹಕರಿಸಿದ್ದೇವೆ. ನೀವು ಕೊಟ್ಟಂತಹ ಭರವಸೆ ಈಡೇರಿಸಬೇಕಾಗಿದೆ ಆ 638 ಕೋಟಿ ರೂಪಾಯಿಯ ಪ್ಯಾಕೇಜ್ ಬಗ್ಗೆ ನಿಮ್ಮ ನಿಲುವೇನು? ಯಾವ ರೀತಿ ನೀವು ಅನುಕೂಲ ಮಾಡಿಕೊಡುತ್ತೀರಿ? ಅದನ್ನು ಯಾವ ರೀತಿ ಚರ್ಚೆ ಮಾಡಬೇಕು? ಈ ಪ್ರವಾಹದ ಬಗ್ಗೆ ಚರ್ಚೆ ಆದ ಮೇಲೆ ಸಮಯ ನಿಗದಿ ಮಾಡಿ, ಆ ಚರ್ಚೆಯಲ್ಲಿ ನಮ್ಮೆಲ್ಲಾ ಸದಸ್ಯರೂ ಭಾಗವಹಿಸುತ್ತಾರೆ. ಸರ್ಕಾರ ಸ್ಪಷ್ಟವಾದಂತಹ ಉತ್ತರವನ್ನು ನಮಗೆ ಕೊಡಬೇಕು. ಭರವಸೆ, ಭರವಸೆಯಾಗಿ ಉಳಿಯಬಾದು. ನವನಗರ ಸರ್ವನಾಶ ಆಗಿದೆ.. ಹಳೆ ನಗರವನ್ನು ನೋಡುವವರು ಇಲ್ಲ. ಇಂತಹ ಪರಿಸ್ಥಿತಿ ಇದೆ. ಅದಕ್ಕೋಸ್ಕರ ನಿಲುವಳಿ ಸೂಚನೆ ಮೂಲಕ ನಾವು ಪ್ರಸ್ತಾಪ ಮಾಡುವುದಕ್ಕೆ ಸಮಯ ನಿಗದಿ ಮಾಡಬೇಕು. ನೀವು ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ನಿಲುವಳಿ ಸೂಚನೆ ತೆಗೆದುಕೊಳ್ಳಬೇಕು. ಈ ಪ್ರವಾಹದ್ದು ಅತ್ಯಂತ ಪ್ರಮುಖವಾದಂತಹದು ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ಮಾನ್ಯ ಕಂದಾಯ ಸಚಿವರು ಉತ್ತರ ಕೊಟ್ಟಿದ್ದಾರೆ. ಅದಾದ ಮೇಲೆ ನಿಲುವಳಿ ಸೂಚನೆಗೆ ತಾವು ಅನುಮತಿ ನೀಡಿ ಚರ್ಚೆಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿಯನ್ನು ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸ ಗೌಡ(ಕೃಷಿ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಹಾಗೆ ಕೋಲಾರ ಜಿಲ್ಲೆಯಲ್ಲಿ ಮೊನ್ನೆ ಅವರ ಕ್ಷೇತ್ರದಲ್ಲಿ ಒಂದೇ ಒಂದು ಊರಿನಲ್ಲಿ ಮಳೆ ಬಿದ್ದಿದೆ. ಇಡೀ ಒಂದೇ ಊರು. ಅದೇನು ಜೋರಾಗಿ ಮಳೆ ಬಿದ್ದು ಇವತ್ತು 2–3 ಮನೆ ಬಿದ್ದು ಹೋಗಿದೆ. ಒಂದು ಮನೆ ಕೊಚ್ಚೇ ಹೋಗಿದೆ. ಕೆಲವು ಬಾವಿಗಳು. ಬೆಳೆ ಎಲ್ಲಾ ನಾಶ ಆಗಿದೆ. ನಾನು ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರು ಅಲ್ಲಿಗೆ ಹೋಗಿ, ಅಲ್ಲಿ ನಮ್ಮ ಕೇಂದ್ರ ಸರ್ಕಾರದ ಏನು ಪ್ರಾವಿಜನ್ ಇದೆ, ಅದರ ಪ್ರಕಾರ ಒಂದು ಮನೆಗೆ 6500, ಉಳಿದವರಿಗೆ 1000 ರೂ ಚಿಲ್ಲರೆ ಹಣವನ್ನು ಕೊಡುವಂತಹ ಕೆಲಸ ಮಾಡಿ ತಂದಿದ್ದೇವೆ. ಇದು ಒಂದು ಭಾಗ ಆದರೆ ಇಡೀ ಜಿಲ್ಲೆಯಲ್ಲಿ ಮಳೆ ಇಲ್ಲ. ನಮಗೆ ಎಷ್ಟು ವಿಚಿತ್ರವಾಗಿದೆ ಎಂದರೆ ಆ ಊರು ಬಿಟ್ಟರೆ ನಾನು ಹೇಳುತ್ತಿರುವುದು ಇಡೀ ಜಿಲ್ಲೆಯಲ್ಲಿ ಮಳೆ ಇಲ್ಲ. ಇವತ್ತು ಈ ಅತಿವೃಷ್ಟಿ, ಅನಾವೃಷ್ಟಿ ಎರಡನ್ನೂ ಕೂಡ ಒಂದೇ ತಕ್ಕಡಿಯಲ್ಲಿ ತೂಗುವಂತಹ ಪರಿಸ್ಥಿತಿ ಬಂದು ಬಿಟ್ಟಿದೆ. ಇದಕ್ಕೆ ಏನು ಮಾಡಬೇಕು ಎನ್ನುವುದನ್ನು ಸರ್ಕಾರ ಮುಂದಿನ ದಿನಗಳಲ್ಲಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಅದಕ್ಕೆ ಚಿಂತನೆ ಮಾಡುತ್ತದೆ. ಬಾಗಲಕೋಟೆಯದು ಬಹಳ ದಿವಸಗಳಿಂದ ಇದೆ. ಅದನ್ನು ಚರ್ಚೆಮಾಡೋಣ. ಆದರೆ ಈಗ ಅತಿವೃಷ್ಟಿಯಿಂದ ಎಲ್ಲೆಲ್ಲಿ ಈ ತರಹ ಆಗಿದೆ ಎಂಬ ಬಗ್ಗೆ ಆಗಲೇ ಕಂದಾಯ ಸಚಿವರು ಅದಕ್ಕೆ ಪೂರ್ತಿ ಮಾಹಿತಿ ಕೊಟ್ಟಿದ್ದಾರೆ. ಏನೇನು ಮಾಡಬೇಕು

ಎನ್ನುವಂತಹ ಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ. ಮಾಡುತ್ತೇವೆ. ಇವತ್ತು ನಮ್ಮ ಜಿಲ್ಲೆಯಲ್ಲಿ 11 ತಾಲ್ಲೂಕಿನಲ್ಲಿ 3 ತಾಲ್ಲೂಕು ಬಿಟ್ಟು ಉಳಿದಿರುವ ತಾಲ್ಲೂಕಿಗೆ ಮಾತ್ರ ಬರ. ಈ ಮೂರು ತಾಲ್ಲೂಕುಗಳಲ್ಲಿ ಬರ ಇಲ್ಲ. ಇವೆಲ್ಲಾ ಹೇಳುವುದಕ್ಕೆ ಹೋದರೆ ಯಾವ ದೃಷ್ಟಿಯಲ್ಲಿ ಇದನ್ನು ನೋಡುತ್ತಾರೆ? ಯಾವ ದೃಷ್ಟಿಯಲ್ಲಿ ಇದನ್ನು ತೆಗೆದುಕೊಳ್ಳುತ್ತಾರೆ ಎನ್ನುವಂಥದ್ದನ್ನು ಚಿಂತನೆ ಮಾಡಬೇಕಾಗುತ್ತದೆ. ಬರೆ ಅತಿವೃಷ್ಟಿಯ ಜೊತೆಗೆ ಅನಾವೃಷ್ಟಿಯ ಕೂಡ ಕೋಲಾರ ಜಿಲ್ಲೆ ಅಂತಹ ಜಿಲ್ಲೆಗಳಲ್ಲಿ ಇದ್ದಾವೆ. ಎನ್ನುವುದನ್ನು ಮಾನ್ಯ ಎಲ್ಲಾ ಸದಸ್ಯರೂ ಅರಿಯಬೇಕು ಎನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತೇನು ಅಲ್ಲಿ ಪರಿಹಾರ ಕೊಡಬೇಕೊ ಅದಕ್ಕೆ ಸರ್ಕಾರ ಬದ್ಧವಾಗಿದೆ. ಆ ಪರಿಹಾರ ಕೊಡುವುದಕ್ಕೆ ನಾವು ಮುಂದಿನ ದಿನಗಳಲ್ಲಿ ಶ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಸಿದ್ದು ಸವದಿ(ಜಮಖಂಡಿ) : ಮಾನ್ಯ ಉಪಾಧ್ಯಕ್ಷರೆ, ಜಮಖಂಡಿ ತಾಲ್ಲೂಕಿನಲ್ಲಿ ಈಗಾಗಲೇ ಮಾನ್ಯ ಕಂದಾಯ ಸಚಿವರು ಹೇಳಿದ ಪ್ರಕಾರ ಕೃಷ್ಣ ನದಿಗೆ ಸುಮಾರು 15 ವರ್ಷಗಳ ನಂತರ ಭಯಾನಕ ಒಂದು ಮಹಾ ಪೂರ ಬಂದು. ನೆರೆ ಹಾವಳಿಯಿಂದ ಸುಮಾರು 21 ಹಳ್ಳಿಗಳ ಜನ ಸಂತ್ರಸ್ಥರಾಗಿ ವಾಸ ಮಾಡುತ್ತಿದ್ದಾರೆ. ಅದರಲ್ಲಿ ಸುಮಾರು 11 ಹಳ್ಳಿಗಳು ಸಂಪೂರ್ಣ ಜಲಾವೃತವಾಗಿ ಇಡೀ ಸಂಪರ್ಕವನ್ನು ಕಡಿದು ಕೊಂಡಿದೆ. ನಾನು ತಮಗೆ ಹೇಳುತ್ತೇನೆ. ಸುಮಾರು 8 ದಿವಸಗಳಿಂದ ಜನಸಂಪರ್ಕವನ್ನು ಕಡಿದುಕೊಂಡಿರತಕ್ಕಂಥ ಹಳ್ಳಿಗಳು, ಅಲ್ಲಿನ ಜನ ಜೀವನವನ್ನು ಕೈಯಲ್ಲಿ ಹಿಡಿದು ಭೀತಿಯಿಂದ ಬದುಕುವಾಗ, ಯಾವ ಅಧಿಕಾರಿಯು ಸಹ ಅವರನ್ನು ಸಂಪರ್ಕ ಮಾಡಿ ಅವರ ಯೋಗಕ್ಷೇಮವನ್ನು ವಿಚಾರ ಮಾಡುವಂತಹ ಒಂದು ವ್ಯವಸ್ಥೆಯನ್ನು ಮಾಡಿಲ್ಲ. ನಾನು ಸ್ವತಃ ಅಲ್ಲಿ ಮೂರು ದಿವಸಹಗಲೂ ರಾತ್ರಿ ಇದ್ದು ಅಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು, ಆಗಲೀ ಉಪ ವಿಭಾಗದ ಅಧಿಕಾರಿಗಳನ್ನು ಆಗಲೀ ಅಲ್ಲಿ ಸಂಪರ್ಕ ಮಾಡಿ ಅಲ್ಲಿರತಕ್ಕಂಥ ಸಂಪರ್ಕ ವ್ಯವಸ್ಥೆಯನ್ನು ಒದಗಿಸಲು ನಾನು ಕೇಳಿಕೊಂಡಾಗ ಅದಕ್ಕೂ ಸಹ ಒಂದು ವ್ಯವಸ್ಥೆ ಮಾಡಲಾದೆ ಕೇವಲ ನಮ್ಮ ಜನಪ್ರತಿನಿಧಿಗಳಿಗೆ ಗೊತ್ತಿಲ್ಲದ ಹಾಗೆ ಒಂದು ಸಭೆಯನ್ನು ಮಾಡಿದ್ದಾರೆ. ಆದರೆ ಯಾವುದೇ ಒಂದು ವ್ಯವಸ್ಥೆ ಇಲ್ಲಿಯವರೆಗೆ ಹೋಗಿ ಮುಟ್ಟಿಲ್ಲ. ಆ ಜನ ಇನ್ನೊಂದು ಘುಟ್ ನೀರು ಬಂದರೇ ಮರ ಹತ್ತಿ ಬದುಕುವಂತಹ ವ್ಯವಸ್ಥೆ ಆ ಪ್ರದೇಶದಲ್ಲಿದೆ. ಸರ್ಕಾರದ ಒಂದು ಹತ್ತು ಯಂತ್ರ ದೋಣಿಗಳು ಬರುತ್ತಾವೇನೋ ಎಂದು ಜಿಲ್ಲಾಧಿಕಾರಿಗಳು ಹೇಳಿದರು. ಆದರೆ ಇವತ್ತಿನವರೆಗೆ, ಕೇವಲ ಎರಡು ದೋಣಿಗಳು ಮಾತ್ರ ಬಂದಿದ್ದಾವೆ. ಯಾವುದೇ ಒಂದು ವ್ಯವಸ್ಥೇ ಮಾಡಿಲ್ಲ. ಜನರು ಭಯದಿಂದ ಎಲ್ಲಾ ಕಡೆಗಳಿಗೂ ಫೋನ್ ಮಾಡಿ, 'ನಮ್ಮನ್ನು ಬದುಕಿಸಿರಿ,. ನಮ್ಮನ್ನು ಬದುಕಿಸಿರಿ' ಎನ್ನುವಂಥ ಒತ್ತಾಯವನ್ನು ನಮ್ಮ ತಾಲ್ಲೂಕಿನ ಸುಮಾರು ಇಪ್ಪತ್ತು ಹಳ್ಳಿಗಳಿಂದ ಜನರು ಮಾಡುತ್ತಿದ್ದಾರೆ. ಯಾವುದೇ ರೀತಿಯ ವ್ಯವಸ್ಥೆಯನ್ನು ಅಲ್ಲಿ ಇದುವರೆಗೂ ಒದಗಿಸಿಲ್ಲ. ಅದಲ್ಲದೆ, ಹಿಪ್ಪರಗಿ ಮತ್ತು ಆಲಮಟ್ಟಿ ಡ್ಯಾಮ್‌ಗಳಿಂದಾಗಿ ಸುಮಾರು ನಾಲ್ಕೈದು ಹಳ್ಳಿಗಳನ್ನು ಮುಳುಗಡೆ ಮಾಡುವ ವ್ಯವಸ್ಥೆ ಕೈಬಿಡಬೇಕು. ಅವರುಗಳಿಗೆ ಪುನರ್ವಸತಿ ಸೌಕರ್ಯ ಒದಗಿಸಿಲ್ಲ. ಈ ಕಾರಣದಿಂದ ಅಲ್ಲಿನ ಗ್ರಾಮಗಳು ಸಂಪೂರ್ಣ ಜಲಾವೃತಗೊಂಡು ಆ ಜನರು ಇವೊತ್ತು ನೀರಿನಲ್ಲಿ ಕೊಚ್ಚಿಹೋಗುವಂಥ ಸಂದರ್ಭ ಇದೆ. ಸನ್ಮಾನ್ಯ ಕಂದಾಯ ಸಚಿವರು ಈಗ ಮಾತನಾಡುತ್ತಾ, ಸುಮಾರು ಮೂರು ಲಕ್ಷ ಕ್ಯೂಸೆಕ್ಸ್‌ನಷ್ಟು ನೀರು ಮಹಾರಾಷ್ಟದಿಮದ ಹರಿದು ಬರುತ್ತಿದೆ ಎಂದರು. ನಿನ್ನೆಯ ರೇಡಿಯೋ ನ್ಯೂಸ್ ಪ್ರಕಾರ ನಾಲ್ಕು ಲಕ್ಷ ಕ್ಯೂಸೆಕ್ಸ್‌ನಷ್ಟು ನೀರನ್ನು ಕೊಯ್ನಾ ಡ್ಯಾಮ್ ಒಂದರಿಂದಲೇ ಬಿಟ್ಟಿದ್ದಾರೆ. 1 ಲಕ್ಷ 21 ಸಾವಿರ ಕ್ಯೂಸೆಕ್ಸ್‌ನಷ್ಟು ನೀರನ್ನು ಕಳವಾಡಿಯಿಂದ ಬಿಟ್ಟಿದ್ದಾರೆ.

ಇದಲ್ಲದೆ, ದೂಧಗಂಗಾ, ವೇದಗಂಗಾ, ಈ ಎಲ್ಲಾ ನದಿಗಳ ನೀರು ಕೃಷ್ಣಾ ನದಿಯನ್ನು ಕೂಡುವುದರಿಂದ ಭಯಾನಕವಾದ ಒಂದು ಮಹಾಪೂರ ಬರುತ್ತಿರುವುದರಿಂದ ಸುಮಾರು ಹತ್ತು ಹಳ್ಳಿಯ ಜನರನ್ನು ಈ ಕ್ಷಣವೇ ಇಲ್ಲಿಗೆ ಹೆಲಿಕಾಪ್ಟರ್ ಸೌಲಭ್ಯ ಒದಗಿಸುತ್ತೀರೋ ಅಥವಾ ಯಾಂತ್ರೀಕೃತ ದೋಣಿಗಳನ್ನು ಒದಗಿಸುತ್ತೀರೋ, ಅವರುಗಳನ್ನು ಬದುಕಿಸಿರಿ ಎನ್ನುವಂಥ ವಿನಂತಿಯನ್ನು ನಾನು ಮಾಡಿಕೊಳ್ಳುತ್ತೇನೆ. ಇಲ್ಲವೆಂದರೆ, ಅವರುಗಳು ನೀರಿನಲ್ಲಿ ಕೊಚ್ಚಿಹೋಗುವ ಸಂದರ್ಭ ಇದೆ. ಇನ್ನೊಂದು ವಿಷಯವೇನೆಂದರೆ, ಇವೊತ್ತು ರಾತ್ರಿ ಬಿಟ್ಟರೆ, ಹತ್ತು ಹಳ್ಳಿಗಳಲ್ಲಿರುವ ಜನರು ಕೃಷ್ಣಾ ನದಿ ಪ್ರವಾಹದಲ್ಲಿ ಸಂಪೂರ್ಣವಾಗಿ ಕೊಚ್ಚಿಹೋಗುವ ಸಂಭವವಿದೆ. ಆ ಅನಾಹುತ ಘಟಿಸುವ ಪೂರ್ವದಲ್ಲಿ ಸರ್ಕಾರ ಎಚ್ಚೆತ್ತುಕೊಳ್ಳಬೇಕೆಂದು ನಾನು ಕೇಳುತ್ತೇನೆ. ಒಂದು ವಾರದಿಂದಲೂ ಅಲ್ಲಿರುವ ಹಳ್ಳಿಯ ಜನರು ನೀರಿನಲ್ಲಿ ಸಿಲುಕಿ ಒದ್ದಾಡುತ್ತಿದ್ದರೂ, ಸರ್ಕಾರ ಏನು ಮಾಡುತ್ತಿದೆ? ಜಿಲ್ಲಾಡಳಿತ ಏನು ಮಾಡುತ್ತಿದೆ? ತಾಲ್ಲೂಕಿನ ಅಧಿಕಾರಿಗಳು ಏನು ಮಾಡುತ್ತಿದ್ದಾರೆ? ಅದರ ಬಗ್ಗೆ ಸರ್ಕಾರ ಉತ್ತರ ಕೊಡಬೇಕು? ಏಕೆ ನೀವು ಆ ಜನರನ್ನು ಬದುಕಿಸುವುದಕ್ಕೆ ಪ್ರಯತ್ನ ಮಾಡಿಲ್ಲ. ಏಕೆ ಮುಂಜಾಗ್ರತೆ ಕ್ರಮ ತೆಗೆದುಕೊಂಡಿಲ್ಲ. ಎನ್ನುವುದನ್ನು ಸರ್ಕಾರ ಇಲ್ಲಿ ಹೇಳಬೇಕಾಗುತ್ತದೆ. ಏಕೆಂದರೆ, ಈ ರಾಜ್ಯದ ಜನರು ಇವೊತ್ತು ಜೀವವನ್ನು ತಮ್ಮ ಕೈಯಲ್ಲಿಟ್ಟುಕೊಂಡು ಬದುಕುತ್ತಿರುವ ಪ್ರಸಂಗವಿರುವಾಗ ಸರ್ಕಾರ ಆ ಕಡೆ ಕಣ್ಣೆತ್ತಿಯೂ ನೋಡಲಾರದಂಥ ಒಂದು ಗಂಭೀರ ಅಪರಾಧವನ್ನು ಮಾಡಿದೆ. ಈ ಸರ್ಕಾರ ಎಲ್ಲಾ ಕಾರ್ಯಗಳನ್ನೂ ಬದಿಗೊತ್ತಿ, ಆ ಜನರ ಪ್ರಾಣವನ್ನು ರಕ್ಷಿಸುವುದಕ್ಕೆ ಇವೊತ್ತು ಅಲ್ಲಿಗೆ ಹೋಗಬೇಕಾಗಿತ್ತು. ಆದರೆ, ಅಲ್ಲಿಗೆ ಹೋಗಿಲ್ಲ. ಯಾವುದೇ ಒಬ್ಬ ಮಂತ್ರಿ ಸಹ ಅಲ್ಲಿಗೆ ಹೋಗಿ, ಅಲ್ಲಿನ ಜನರ ಯೋಗಕ್ಷೇಮ ವಿಚಾರಿಸುವಂಥ ವ್ಯವಸ್ಥೆ ಮಾಡಿಲ್ಲ. ಅದಲ್ಲದೆ. ಇನ್ನು 11 ಹಳ್ಳಿಗಳು. ಸಂಪೂರ್ಣ ಜನಸಂಪರ್ಕ ಕಡಿದುಕೊಂಡರೆ ಭಾಗಶಃ ಸಂಪರ್ಕ ಕಳೆದುಕೊಂಡಿರತಕ್ಕ ಹತ್ತು ಹಳ್ಳಿಗಳು ಜಮಖಂಡಿ ತಾಲ್ಲೂಕಿನಲ್ಲಿವೆ. ಉದಾಹರಣೆಗಾಗಿ, ಅಲ್ಲಿನ ತೋಟಗಳಲ್ಲಿ ಯಾರು ಬೇಸಾಯ ಮಾಡುತ್ತಿದ್ದರೋ, ಆ ತೋಟಗಳ ಸುತ್ತಲೂ ನೀರು ಸುತ್ತುವರೆದಿರುವುದರಿಂದ ಅಲ್ಲಿಂದ ಯಾರೂ ಹೊರಬರಲಾರದ ಪರಿಸ್ಥಿತಿಯೊದಗಿದೆ. ಅಕ್ಷರಶಃ ಕಲ್ಲಳ್ಳಿ, ಆಸಗಿ ಕಂಕಣವಾಡಿ, ಕಡಕೋಳ, ಟಕ್ಕಲಕಿ, ತಕ್ಕೋಡ, ಜಂಬಗಿ(ಕೆ.ಡಿ), ಜಂಬಗಿ(ಬಿ.ಕೆ), ಶೂರ್ಪಾಲಿ, ಈ ಎಲ್ಲಾ ಗ್ರಾಮಗಳ ರೈತರು ಮರವನ್ನೇರಿದ್ದಾರೆ. ಮರವನ್ನೇರಿರುವ ಅವರಿಗೆ ಸಾಯುವ ಸ್ಥಿತಿಯುಂಟಾಗಿದ್ದು, ಅವರೆಲ್ಲರೂ ಚೀರಾಡುತ್ತಿದ್ದಾರೆ. ಯಾವ ಅಧಿಕಾರಿಯು, ಯಾವ ವ್ಯವಸ್ಥೆಯೂ, ಯಾವ ಸರ್ಕಾರವೂ ಸಹ ಆ ರೈತ ಬಾಂಧವರ ಕಡೆಗೆ ನೋಡುತ್ತಿಲ್ಲ. ಈ ರಾಷ್ಟ್ರಕ್ಕೆ ಅನ್ನ ಹಾಕುವ ರೈತ ತನ್ನ ಜೀವವನ್ನು ಒಂದು ಕೈಯಲ್ಲಿಡಿದುಕೊಂಡು ಮರವೇರಿ ಬದುಕುತ್ತಿದ್ದಾನೆ. ಆತನಿಗೆ ಆಹಾರ ಒದಗಿಸುವ ವ್ಯವಸ್ಥೆ ಇಲ್ಲ. ಇದಿಷ್ಟಾದರೆ, ಇನ್ನು ಅವನ ಸಾಕುಪ್ರಾಣಿಗಳೂ ಸಹ ಎರಡು ದಿವಸಗಳಿಂದ ಉಪವಾಸ ಬಿದ್ದಿವೆ. ಅವನ ಜೊತೆಯೇ ಅವು ಬದುಕುತ್ತಿವೆ. ಅವುಗಳಿಗೆ ಮೇವಿನ ವ್ಯವಸ್ಥೆ ಇಲ್ಲ. ಆ ಮೇವಿನ ವ್ಯವಸ್ಥೆಯನ್ನು ಸಹ ಸರ್ಕಾರ ಮಾಡಬೇಕು. ಅದಲ್ಲದೆ, ನಾನು ಮೊನ್ನೆ ನಾಲ್ಕಾರು ಹಳ್ಳಿಗಳನ್ನು ತಿರುಗಾಡಿ ನೋಡಿದಾಗ ರೈತರು ತಮ್ಮ ತೋಟಗಳಲ್ಲಿ ವಸತಿ ಮಾಡಿ ಕಟ್ಟಿಕೊಂಡಿರುವ ಮನೆಗಳೆಲ್ಲವೂ ಸಂಪೂರ್ಣವಾಗಿ ಕುಸಿದು ಬಿದ್ದಿದೆ. ಎಲ್ಲಾ ಮನೆಗಳು ವಾಸಕ್ಕೆ ಯೋಗ್ಯವಿರಲಾರದ ರೀತಿಯಲ್ಲಿ ಎಲ್ಲವೂ ಕುಸಿದು ಬಿದ್ದು ನೆಲಸಮಗೊಂಡಿವೆ. ಮೊನ್ನೆ ಸಚಿವರು ಮಾತನಾಡುತ್ತಾ, ಈ ರಾಜ್ಯಕ್ಕೆ 13 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ. ನನ್ನ ತಾಲ್ಲೂಕಿನಲ್ಲಿ ಸುಮಾರು.....

ಉಪಾಧ್ಯಕ್ಷರು : ತಾವು ಎಷ್ಟೊತ್ತು ಮಾತನಾಡಬೇಕೆಂದಿದ್ದೀರಿ? ಭಾಷಣ ಮಾಡುತ್ತಿದ್ದೀರಾ?

ಶ್ರೀ ಸಿದ್ದು ಸವದಿ : ಸರ್, ನಾನು ಸಮಸ್ಯೆಗಳನ್ನು ಹೇಳಬೇಕಲ್ಲಾ.

ಉಪಾಧ್ಯಕ್ಷರು : ಸಮಸ್ಯೆಗಳನ್ನು ಎಷ್ಟು ಹೊತ್ತು ಹೇಳಬೇಕು? ಸಮಸ್ಯೆಗಳನ್ನು ಹೇಳುವವರು ಇನ್ನೂ ಬಹಳ ಜನರಿದ್ದಾರೆ ಬೇಗ ಮುಗಿಸಿ. ಈಗ ಅದನ್ನೇ ಒಂದು ದಿವಸ ಮಾಡುವುದಕ್ಕಾಗುವುದಿಲ್ಲ. ಬೇಗ ಮುಗಿಸಿ.

ಶ್ರೀ ಸಿದ್ದು ಸವದಿ : ಅಲ್ಲಿ ಜನರು ಸಾಯುತ್ತಿದ್ದಾರೆ. ಅದನ್ನು ಭಾಷಣ ಮಾಡಿಯೇ ಹೇಳಬೇಕು. ಮೂಕವಾಗಿ ಹೇಳುವುದಕ್ಕಾಗುತ್ತದೆಯೇ?

ಉಪಾಧ್ಯಕ್ಷರು : ಅಂತಹ ಸಮಸ್ಯೆಗಳಿರುವ ಬೇಕಾದಷ್ಟು ಎಂಎಲ್ಎಗಳಿದ್ದಾರೆ. ಬಹಳಷ್ಟು ಜನರು ಹೇಳುತ್ತಿದ್ದಾರೆ. ಬೇಗ ಮುಗಿಸಬೇಕು. ಗಂಟೆಗಟ್ಟಲೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಇಲ್ಲಿ ಗಂಟೆಗಟ್ಟಲೆ ಮಾತನಾಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದು ಸವದಿ : ಅಲ್ಲಿ ದನಗಳನ್ನು ಬದುಕಿಸುವುದಕ್ಕೆ ಮೇವಿನ ವ್ಯವಸ್ಥೆ ಮಾಡಬೇಕು. ಅಲ್ಲಿ ಕಬ್ಬಿನ ಬೆಳೆಯನ್ನು ಆಧಾರವಾಗಿಟ್ಟುಕೊಂಡು ಬದುಕುತ್ತಿರುವ ರೈತ ಸಮೂಹ ಇದೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 200 ಕೋಟಿ ರೂಪಾಯಿಗಳಷ್ಟು ಕಬ್ಬಿನ ಬೆಳೆ ಹಾಳಾಗಿದೆ. ವಿವಿಧ ಆಹಾರ ಧಾನ್ಯಗಳ ಬೆಳೆಗಳು ಹಾಳಾಗಿವೆ. ಮನೆಗಳು ಸುಮಾರು 16 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಸಹ ಅಂತಹ ಮನೆಗಳನ್ನು ನಿರ್ಮಿಸುವುದಕ್ಕಾಗುವುದಿಲ್ಲ, ಎಲ್ಲಾ ರೈತರ ಜೀವನ, ಕೂಲಿ ಕಾರ್ಮಿಕರ ಜೀವನ, ಹರಿಜನ-ಗಿರಿಜನರ ಜೀವನ ಸರ್ವನಾಶವಾಗಿದೆ. ಅದಕ್ಕಾಗಿ ಸರ್ಕಾರ ತಕ್ಷಣ ಎಚ್ಚೆತ್ತು ಜಮಖಂಡಿ ತಾಲ್ಲೂಕಿಗೆ ಹೋಗಿ, ಇಡೀ ಕೃಷ್ಣಾ ನದಿ ಬೇಸಿನ್‌ನಲ್ಲಿ ತೊಂದರೆಗೊಳಗಾಗಿರುವ ರೈತರನ್ನು ಬದುಕಿಸುವುದಕ್ಕೋಸ್ಕರ ಅವರಿಗೆ ಗಂಜಿ ಕೇಂದ್ರಗಳನ್ನು ತೆರೆಯುವ ಸಲುವಾಗಿ ಮತ್ತು ಅವರಿಗೆ ಪುನರ್ವಸತಿ ಕಲ್ಪಿಸಿಕೊಡುವ ಸಲುವಾಗಿ ಸರ್ಕಾರ ಕ್ರಮ ತೆಗೆದುಕೊಳ್ಳಬೇಕು, ಅದಷ್ಟೇ ಅಲ್ಲದೆ, ಅಧಿಕಾರಿಗಳ ಮಾತಿಗೆ ಕಟ್ಟುಬಿದ್ದು, ಯಾವ ರೀತಿ ಪುನರ್ವಸತಿಯಲ್ಲಿ ಅನ್ಯಾಯಕ್ಕೊಳಗಾದ ಗ್ರಾಮಗಳಿವೆಯೋ, ಅಸಂಗಿಯಾಗಲಿ, ಹಿರೇಪಡಸಲಗಿಯಾಗಲಿ, ಸಾನಲ ಆಗಲಿ, ಅಂತಹ ಗ್ರಾಮಗಳಿಗೆ ಪುನರ್ವಸತಿ ಕಲ್ಪಿಸಿಕೊಡಬೇಕು. ಏಕೆಂದರೆ, ಇಂತಹ ಅನಾಹುತಗಳುಂಟಾದಾಗ ಮಾತ್ರ ಅಲ್ಲಿರತಕ್ಕ ರೈತರ ಬಗ್ಗೆ ಕಾಳಜಿ ವಹಿಸುವ ಸರ್ಕಾರ, ಯಾವ ರೀತಿ ಅಧಿಕಾರಿ ಮಟ್ಟದಲ್ಲಿ, ಅಧಿಕಾರಿಗಳಿಂದ ಹಳ್ಳಿಗಳಿಗೆ ಅನ್ಯಾಯವಾಗಿದೆಯೆಂದು ಎಂದೂ ನೋಡಿಲ್ಲ. ಆ ಅನ್ಯಾಯವನ್ನು ಸರಿಪಡಿಸಿ ಅವರಿಗೆ ಪುನರ್ವಸತಿ ಕೇಂದ್ರ ಕಲ್ಪಿಸಿಕೊಡುವುದರ ಮೂಲಕ ಅವರಿಗೆ ನ್ಯಾಯ ಒದಗಿಸಿಕೊಡಬೇಕೆಂಬ ಒತ್ತಾಯವನ್ನು ಸರ್ಕಾರದ ಮುಖಾಂತರ ನಾನು ಮಾನ್ಯ ಸಚಿವರಿಗೆ ಮಾಡಬಯಸುತ್ತೇನೆ.

ಉಪಾಧ್ಯಕ್ಷರು : ಮಾನ್ಯ ರೇವುನಾಯಕರೆ, ತಾವು ಕೇಳುವುದೇನಾದರೂ ಇದ್ದರೆ, ಒಂದೇ ನಿಮಿಷದಲ್ಲಿ ಕೇಳಬೇಕು. ಅವರ ತರಹ ತಾವು ಭಾಷಣ ಮಾಡುವುದಕ್ಕೆ ಹೋಗಬೇಡಿ.

ಶ್ರೀ ರೇವುನಾಯಕ್ ಬೆಳಮಗಿ(ಕಮಲಾಪುರ) : ಮಾನ್ಯ ಉಪಾಧ್ಯಕ್ಷರೆ, ಆಯಿತು. ಗುಲ್ಬರ್ಗ ಜಿಲ್ಲೆಯಲ್ಲಿ ಎರಡು ತಿಂಗಳು ಬಿತ್ತನೆಯಾಗಲಿಲ್ಲ. ಮಳೆ ಬರಲಿಲ್ಲ. 'ಭಯಂಕರ ಬರಗಾಲಪೀಡಿತ ಪ್ರದೇಶ' ವೆಂದು ಘೋಷಿಸಬೇಕೆಂದು ಇದೇ ಸದನದಲ್ಲಿ ನಾನು ಮಾತನಾಡಿದ್ದೇನೆ. ರೈತರು ಮಳೆ ಬರುತ್ತದೆಂದು ಆಸೆ ಇಟ್ಟುಕೊಂಡು ಬಿತ್ತನೆ ಮಾಡಿದರು. ಬೀಜ ಹೋಯಿತು, ಗೊಬ್ಬರ ಹೋಯಿತು, ಎಲ್ಲಾ ಹೋಯಿತು, ನಾಟಿ ಏಳಲಿಲ್ಲ, ಈಗ ಮಳೆಯ ಅತಿವೃಷ್ಟಿಯಿಂದಾಗಿ

ಏಕಾಏಕಿ ಮಳೆ ಸುರಿದು ಬಹಳಷ್ಟು ರಸ್ತೆಗಳು ಹದಗೆಟ್ಟಿವೆ. ಮನೆಗಳು ಬಿದ್ದಿವೆ, ಅದರಲ್ಲಿ ಬೆಣ್ಣೆತೊರೆ ಪ್ರಾಜೆಕ್ಟ್‌ನಲ್ಲಿ ನೀರು ನಿಂತಿರುವುದರಿಂದ ಎಂಟು ಹಳ್ಳಿಗಳು ಬಹಳ ತೊಂದರೆಯಲ್ಲಿವೆ. ಏಕೆಂದರೆ, ಅವರುಗಳಿಗೆ ಪುನರ್ವಸತಿ ಕಲ್ಪಿಸಿಕೊಟ್ಟಿಲ್ಲ. ಅವರಿಗೆ ಸಹಾಯಧನ ಕೊಟ್ಟಿಲ್ಲ. ಅನೇಕ ಬಡ ಜನರು, ಚಪ್ಪರದ ಮನೆ ಇದ್ದವರಿಗೆ ಸೈಟ್ ಕೊಟ್ಟರು, ಇವರುಗಳಿಗೆ ಮನೆಗಳಿಲ್ಲ. ಅದಕ್ಕೆ ತಮ್ಮ ಮುಖಾಂತರ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಗುಲ್ಬರ್ಗಾ ಜಿಲ್ಲೆಗೆ ಹೆಚ್ಚಿನ ಆದ್ಯತೆ ಕೊಟ್ಟು ಕಂದಾಯ ಸಚಿವರು ಎರಡು ಕೋಟಿ ಕೊಡುವುದಾಗಿ ಹೇಳಿದ್ದಾರೆ. ಆದರೆ, ಅದು ಸಾಲುವುದಿಲ್ಲ. ಎಲ್ಲಾ ರಸ್ತೆಗಳು ಹದಗೆಟ್ಟಿವೆ. ಸೇತುವೆಗಳು ಹೋಗಿವೆಯೆಂದು ಫೋನ್ ಕರೆಗಳು ಬರುತ್ತಿದೆ. ಬಸ್ ಸೌಕರ್ಯ ಒದಗಿಸುವುದಕ್ಕಾಗುವುದಿಲ್ಲ. ಅದಕ್ಕಾಗಿ ಬೆಣ್ಣೆತೋರೆ ಪ್ರಾಜೆಕ್ಟ್‌ನಲ್ಲಿ ಎಂಟು ಹಳ್ಳಿಗಳು ಮುಳುಗಡೆಯಾಗುತ್ತವೆ. ಅವುಗಳಿಗೆ ಪುನರ್ವಸತಿಯಾಗಿಲ್ಲ. ಚಪ್ಪರದ ಮನೆಗಳಿದ್ದವರಿಗೆ ಖಾಲಿ ಸೈಟುಗಳನ್ನು ಕೊಟ್ಟಿದು, ಮನೆಗಳಿರುವುದಿಲ್ಲ. ಅಂತಹವರಿಗೆ ಪ್ರತಿ ಊರಿಗೆ ಐವತ್ತು ಆಶ್ರಯ ಮನೆಗಳನ್ನು ಒದಗಿಸಿಕೊಟ್ಟು ಸಹಾಯ ಮಾಡಬೇಕು. ಬೆಣ್ಣೆತೊರೆ ಪ್ರಾಜೆಕ್ಟ್‌ನಡಿ 8–10 ಹಳ್ಳಿಗಳವರು ಬಹಳ ತೊಂದರೆಗಳಾಗಿರುವುದರಿಂದ ಅವರುಗಳ ಪುನರ್ವಸತಿಗೆ ಸರ್ಕಾರ ಸಹಾಯ ಮಾಡಬೇಕು. ಬೇರೆ ಕಡೆ ಅವರುಗಳಿಗೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ನಾನು ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮತ್ತು ಗುಲ್ಬರ್ಗಾ ಜಿಲ್ಲೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಹೆಚ್ಚು ಹಣ ಒದಗಿಸಿಕೊಡಬೇಕೆಂದು ಮತ್ತೊಮ್ಮೆ ಅವರಿಗೆ ವಿನಂತಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚರಂತಿಮಠ ವೀರಣ್ಣ ಚಂದ್ರಶೇಖರಯ್ಯ(ಬಾಗಲಕೋಟೆ) : ಮಾನ್ಯ ಉಪಾಧ್ಯಕ್ಷರೆ, ಈಗಾಗಲೇ ಬಾಗಲಕೋಟೆಯ ಪ್ಯಾಕೇಜ್ ಬಗ್ಗೆ ನಮ್ಮ ನಾಯಕರು ನಿಲುವಳಿ ಸೂಚನೆ ಕೊಟ್ಟಿದ್ದಾರೆ. ಅದನ್ನು ತಾವು ಅಂಗೀಕರಿಸಿ ಚರ್ಚೆಗೆ ಅವಕಾಶ ಮಾಡಿಕೊಡುತ್ತೀರೆಂದು ನಾನು ಭಾವಿಸಿದ್ದೇನೆ. ಅದೊಂದು ಭಾಗ. ಎರಡನೆಯದು, ಈಗ ನಮ್ಮ ತಾಲ್ಲೂಕಿನ ಬಗ್ಗೆ ನಾನು ಸಚಿವರಿಗೆ ಪತ್ರವನ್ನೂ ಕೂಡ ಕೊಟ್ಟಿದ್ದೇನೆ. ಅದರಲ್ಲಿ ಬೊಮ್ಮಣಗಿ, ಊರಂತೂ ಪೂರ್ತಿ ನೀರಲ್ಲಿ ನಿಂತಿದೆ. ಹೋದ ವರ್ಷ ಕೂಡ ಇದೇ ಸ್ಥಿತಿಯಾಗಿತ್ತು. ಆಗಲೇ ನಮ್ಮ ಕೃಷಿ ಸಚಿವರು ಮಾತನಾಡಿದಂತೆ, ಕೋಲಾರ ಜಿಲ್ಲೆಯಲ್ಲಿ ಮಳೆಯಾಗಿಲ್ಲ. ಬಾಗಲಕೋಟೆ ಜಿಲ್ಲೆಯಲ್ಲಿ ಕೂಡ ಮಳೆಯಾಗಿಲ್ಲ. ಜಮಖಂಡಿಯಿಂದ ಹಿಡಿದು ಹುನಗುಂದದವರೆಗೆ ಆರು ತಾಲ್ಲೂಕುಗಳಲ್ಲಿ ಮಳೆಯಾಗಿಲ್ಲ. ಮಹಾರಾಷ್ಟ್ರದಲ್ಲಾದ ಮಳೆಯ ನೀರು ಹರಿದು ಬಂದು ನಮ್ಮ ಇಡೀ ಜಿಲ್ಲೆಯಲ್ಲಿ ಆವರಿಸಿಕೊಂಡು, ಇಡೀ ಜಿಲ್ಲೆಯನ್ನು ಅಸ್ತವ್ಯಸ್ತಗೊಳಿಸಿರುವಂಥ ಒಂದು ಘಟನೆಯನ್ನು ತಾವು ಇವೊತ್ತು ನೋಡುತ್ತಿದ್ದೀರಿ. ಹೋದ ವರ್ಷ ಕೂಡ ಜಿಲ್ಲಾಧಿಕಾರಿಗಳು ವರದಿ ಕೊಟ್ಟಿದ್ದರು. ಬೊಮ್ಮಣಗಿ ಗ್ರಾಮವನ್ನು ಸ್ಥಳಾಂತರ ಮಾಡಬೇಕು. ಅಲ್ಲಿ ಅಕ್ವೇರ್ ಮಾಡಲಾರದಂಥ ಅನೇಕ ಹಳ್ಳಿಗಳ ಜಮೀನನ್ನು ತಾವು ಅಕ್ವೇರ್ ಮಾಡಿಕೊಂಡು ಅವರಿಗೆ ಪರಿಹಾರ ಕೊಡಬೇಕು. ಈಗ ಆಗಿರುವ ಬೆಳೆ ಹಾನಿಗೆ ಪರಿಹಾರ ಕೊಡಬೇಕೆಂದು ಹೋದ ವರ್ಷ ಜಿಲ್ಲಾಧಿಕಾರಿಗಳು ಒಂದು ವರದಿ ಕೊಟ್ಟಿದ್ದರು. ಒಂದು ವರ್ಷವಾದರೂ ಕೂಡ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮ ತೆಗೆದುಕೊಳ್ಳಲಿಲ್ಲ. ಈ ವರ್ಷವೂ ಕೂಡ ಮತ್ತೆ ಅದೇ ರೀತಿ ಪರಿಸ್ಥಿತಿ ಮರುಕಳಿಸಿದೆ. ಮತ್ತೆ ಅದೇ ಊರನ್ನು ಸುತ್ತುವರೆದ ನೀರು, ಅಕ್ವೇರ್ ಆಗಲಾರದ ಜಮೀನಿನಲ್ಲಿ ನೀರು ನುಗ್ಗಿ ಬೆಳೆ ಹಾನಿಯಾಗಿದೆ. ಇಂತಹ ಅಸ್ತವ್ಯಸ್ತತೆಯಾಗಿದ್ದರೂ ಕೂಡ ಇನ್ನೂ ಅಲ್ಲಿ ಪರಿಹಾರ ಕಾರ್ಯ ಪ್ರಾರಂಭವಾಗಿಲ್ಲ. ಇನ್ನು ಕಮೀಷನರ್ ಹತ್ತಿರ ಮಾತನಾಡಿದರೆ, 'ನಮ್ಮ ಹತ್ತಿರ ದುಡ್ಡಿಲ್ಲ. ನೀವು–ನೀವೇ ಏನಾದರೂ ಮಾಡಿಕೊಳ್ಳಿ' ಎನ್ನುವಂತಹ

ಉತ್ತರವನ್ನು ಕೊಟ್ಟಿದ್ದಾರೆಂದು ನಮ್ಮ ಜಿಲ್ಲಾಧಿಕಾರಿಗಳು ಹೇಳುತ್ತಿದ್ದಾರೆ. ದಯವಿಟ್ಟು ನಿಲುವಳಿ ಸೂಚನೆ ಮೇಲೆ ತಾವು ಅನುಮತಿ ಕೊಟ್ಟ ನಂತರ ನಾವು ಬಾಗಲಕೋಟೆ ಸಮಸ್ಯೆ ಬಗ್ಗೆ ಮಾತನಾಡುತ್ತೇವೆ. ಆದರೆ, ತುರ್ತಾಗಿ ಆಗಬೇಕಾದಂಥ ಪರಿಹಾರದ ಬಗ್ಗೆ ನಾವು ಸರ್ಕಾರದ ಗಮನಕ್ಕೆ ನಾವು ತರಬಯಸುತ್ತೇವೆ. ಅಲ್ಲಿನ ಪರಿಹಾರ ಕಾರ್ಯ ಅತ್ಯಂತ ಬೇಗ ಪ್ರಾರಂಭವಾಗಿ, ಆ ಜನರನ್ನು ರಕ್ಷಣೆ ಮಾಡುವಂಥ ಕೆಲಸ ಬಹಳ ಶೀಘ್ರಗತಿಯಲ್ಲಿ ಆಗಬೇಕೆಂದು ತಮ್ಮ ಮುಖಾಂತರ ನಾನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ವೀರಬಸವಂತರೆಡ್ಡಿ ಮುದ್ನಾಳ್ : (ಯಾದ್‌ಗೀರ್) : ಮಾನ್ಯ ಉಪಾಧ್ಯಕ್ಷರೇ, ನಾನು ಮೂರು ವಿಷಯವನ್ನು ತಮ್ಮಲ್ಲಿ ಪ್ರಸ್ತಾಪ ಮಾಡಬೇಕಾಗಿದೆ. ಮೊದಲನೆಯದು, ಸರ್ಕಾರ ಇವತ್ತು ಹತ್ತು ಕೋಟಿ ರೂಪಾಯಿ ಒಂದೊಂದು ಜಿಲ್ಲೆಗೆ distribute ಮಾಡಿದರೂ ಅಲ್ಲಿದ್ದ ತಹಶೀಲ್ದಾರರಾಗಲಿ, ಸೆಕ್ರೆಟರಿಯಾಗಲಿ ಕೆಲಸ ಮಾಡಲು ಎಷ್ಟು ರೊಕ್ಕ ಕೊಟ್ಟರೂ ವೇಸ್ಟ್ ಆಗುತ್ತದೆ. ನಿನ್ನೆ ತಾನೇ ನೋಡಿ ಬಂದಿದ್ದೇನೆ. ನಾನು: ಜನರು ನೀರಿನಿಂದ ಊರನ್ನು ಬಿಟ್ಟು ಹೊರಗೆ ಗುಡಿಸಲನ್ನು ಹಾಕಿಕೊಂಡಿದ್ದಾರೆ. ಅವರಿಗೆ ಅನ್ನ ಇಲ್ಲ, ಏನೂ ಇಲ್ಲ. ಆ ಗಾಳಿಗೆಲ್ಲಾ ಅವರೇನು ಪರದೆ ಹಾಕಿಕೊಂಡಿದ್ದಾರೆ ಅದು ಹರಿದು ಹೋಗಿದೆ. ಡಿ.ಸಿ. ಯವರಿಗೆ ಹೇಳಿದ್ದೇನೆ. ತಹಶೀಲ್ದಾರರಿಗೆ ಹೇಳಿದ್ದೇನೆ. ಮಳೆಬಂದವರಿಗೆ ಹೊದ್ದುಕೊಳ್ಳಲು ಏನೂ ಇಲ್ಲ. ಏನಾದರೂ ಕೊಡಿ ಎಂದು, ಒಂದು ನಯಾಪೈಸೆ ಕೆಲಸ ಅಲ್ಲಿ ಆಗುವುದಿಲ್ಲ. ನಾನು ಹೇಳುವುದು ಇಷ್ಟೆ. ನೀವು ನೂರು ಕೋಟಿ ರೂ. ಕೊಡಬಹುದು. ಪ್ರಾಕ್ಟಿಕಲ್ ಗ್ರೌಂಡ್‌ನಲ್ಲಿ ಏನು ಮಾಡದಿದ್ದರೆ ಆ ಬಡ ಜನರಿಗೆ ಏನೂ ಪ್ರಯೋಜನವಿಲ್ಲ. ನಾವು ಇಷ್ಟು ಇಲ್ಲಿ ಮಾತನಾಡುತ್ತೇನೆ. ಅವನಿಗೆ ಹೊದೆಯಲು ನೀವು ಕೊಡಲಿಲ್ಲ. ಊಟ ಕೊಡಲಿಲ್ಲವೆಂದರೆ ಇದೆಲ್ಲಾ ವೇಸ್ಟ್ ಆಗುತ್ತದೆ. ಎರಡನೆಯದು. ನಾವೇನು ಈಗ ಬ್ಯಾರೇಜ್ ಹಾಕಿದ್ದೇವೆ ಎಲ್ಲಾ ಕಡೆ ಎಲ್ಲಾ ಗೇಟ್ಸ್ ಬಂದ್ ಆಗಿದೆ. ಸಡನ್ ಫ್ಲಡ್ಸ್ ಬರುತ್ತದೆ ಆಗ ಆ ಗೇಟನ್ನು ತೆಗೆಯಲು ನಮಗೆ ಆಗುವುದಿಲ್ಲ. That is exaggerating the situation. ಅದಕ್ಕಾಗಿ ಬ್ಯಾರೇಜ್‌ಗಳು ಮೆಕ್ಯಾನಿಕ್ ಅಲ್ಲ, ನಾವು ಕೈನಿಂದ ಎತ್ತಬೇಕು. You should improve our gate system of opening. ಬ್ಯಾರೇಜ್‌ನೊಳಗೆ it has become more aggravating. ನಮ್ಮ ವಿನಂತಿ ಇಷ್ಟೆ. ನೀವು ಎಷ್ಟು ಕೊಟ್ಟರೂ ದಯಮಾಡಿ. The Tahsildar must be instructed to go; some of them don't go to the site at all. ಹೋಗುವುದೇ ಇಲ್ಲ. ಅಲ್ಲೇ ಕುಳಿತು ಮಾತನಾಡುತ್ತಿರುತ್ತಾರೆ. ಅದಕ್ಕಾಗಿ ನನ್ನದು ಸರ್ಕಾರಕ್ಕೆ ವಿನಂತಿ ಇಷ್ಟೆ. unless your Tahsildar lower wakes up, nothing can come up.ಅದಕ್ಕೆ Lower level officialsಗೆ active ಆಗಿ ಎಂದು ಹೇಳಿದರೆ ಮುಂದೆ ನಮ್ಮ situation improve ಆಗಬಹುದು. ಧನ್ಯವಾದಗಳು.

ಶ್ರೀ ಶಿವರಾಜ್ ಸಜ್ಜನರ್ (ಹಾವೇರಿ) : ಮಾನ್ಯ ಉಪಾಧ್ಯಕ್ಷರೇ, ಹಾವೇರಿ ತಾಲ್ಲೂಕಿನಲ್ಲಿ ತುಂಗಭದ್ರಾ ಮತ್ತು ವರದಾ ನದಿಗಳು ಗಳಗನಾಥ ಎಂಬ ಊರಿನಲ್ಲಿ ಕೂಡುತ್ತಿರುವುದರಿಂದ, ಸಂಗಮವಾಗುತ್ತಿರುವುದರಿಂದ ಆ ಎರಡೂ ನದಿಯ ನೆರೆಹಾವಳಿಯಿಂದ ಹಾವೇರಿ ತಾಲ್ಲೂಕಿನಲ್ಲಿ ಐದರಿಂದ ಹತ್ತು ಸಾವಿರ ಎಕರೆ ಸಂಪೂರ್ಣ ಮುಳುಗಿಹೋಗಿದೆ. ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚಿನ ಮನೆಗಳು ಭಾಗಶಃ ಹಾಗೂ ಪೂರ್ಣ ಬಿದ್ದುಹೋಗಿರುವುದರಿಂದ ಹೊಲ ಮುಳುಗಿರುವಂಥ ರೈತರ ಪ್ರತಿ ಎಕರೆಗೆ ಐದು ಸಾವಿರ ರೂಪಾಯಿಗಳ ಪರಿಹಾರವನ್ನು ಕೊಡಬೇಕು. ಮತ್ತು ಮನೆ ಬಿದ್ದಿರುವಂಥವರಿಗೆ ಆಶ್ರಯ ಮನೆ ಇರಬಹುದು, ಇಂದಿರಾ ಅವಾಜ್ ಹಾಗೂ ಬೇರೆ ಬೇರೆ ರೂಪಗಳಿಂದ ತಕ್ಷಣ ಪರಿಹಾರವನ್ನು ಕೊಡಬೇಕು ಮತ್ತು ಹಾವೇರಿ ತಾಲ್ಲೂಕಿನ ಜಿಲ್ಲಾ

ಪಂಚಾಯಿತಿ ಮತ್ತು ಲೋಕೋಪಯೋಗಿ ಅನೇಕ ರಸ್ತೆಗಳು ಸಂಪೂರ್ಣ ಹಾಳಾಗಿವೆ. ಯಾವ ರಸ್ತೆಯಲ್ಲೂ ಇವತ್ತು ಬಸ್ಸಿನ ಸಂಚಾರ ನಡೆಯುತ್ತಿಲ್ಲ. ನಡೆದುಕೊಂಡು ಹೋಗಲೂ ಇವತ್ತು ತೊಂದರೆಯಾಗುತ್ತಿದೆ. ಆ ಕಾರಣದಿಂದ ಮಾನ್ಯ ಕಂದಾಯ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹಾವೇರಿ ಜಿಲ್ಲೆಗೆ ಇದುವರೆಗೆ ಯಾವುದೇ ಪರಿಹಾರವನ್ನು ಮಾನ್ಯ ಕಂದಾಯ ಮಂತ್ರಿಗಳು ಘೋಷಣೆ ಮಾಡಿಲ್ಲ. ನಾನು ಬೆಳಿಗ್ಗೆ ಅವರಿಗೆ ಪತ್ರವನ್ನು ಕೊಟ್ಟು ವಿನಂತಿಯನ್ನು ಕೂಡ ಮಾಡಿಕೊಂಡಿದ್ದೇನೆ. ಕೇವಲ ಒಂದು ಕೋಟಿ ರೂ ಯನ್ನು ಬಿಡುಗಡೆ ಮಾಡುತ್ತೇನೆಂದು ಅವರು ಮೌಖಿಕವಾಗಿ ಈಗಾಗಲೇ ನನಗೆ ಹೇಳಿದ್ದಾರೆ. ಒಂದು ಕೋಟಿ ರೂಪಾಯಿಯನ್ನು ಕೊಟ್ಟರೆ ಅದು ಯಾವುದಕ್ಕೂ ಕೂಡ ಸಾಕಾಗುವುದಿಲ್ಲ. ಹಾವೇರಿ ತಾಲ್ಲೂಕಿನಲ್ಲಿ ಪ್ರಮುಖವಾಗಿ ಹೆಚ್ಚಿನ ಒಂದು ಹಾನಿಯಾಗಿರುವುದರಿಂದ ಹಾವೇರಿ ತಾಲ್ಲೂಕಿಗೇ ಮೂರು ಕೋಟಿ ರೂಪಾಯಿಗಳ ಪರಿಹಾರವನ್ನು ಕೊಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಕಂದಾಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎಂ.ಎಸ್. ಸೋಮಲಿಂಗಪ್ಪ (ಸಿರಗುಪ್ಪ) : ಮಾನ್ಯ ಅಧ್ಯಕ್ಷರೆ, ಸುಮಾರು ಹದಿನೈದು ದಿವಸದ ಕೆಳಗೆ ಭಾರಿ ಮಳೆ ಬಂದು ಸುಮಾರು ಐದು ರಸ್ತೆಗಳು ನಮ್ಮಲ್ಲಿ ಕಟ್ ಆಗಿವೆ. ದಮ್ಮೂರು ರಸ್ತೆ, ದರಲೂರು ಹೆಚ್. ಹೊಸಳ್ಳಿ ರಸ್ತೆ, ಕೆಂಚನಗುಡ್ಡ ರಸ್ತೆ ಇಂಥ ರಸ್ತೆಗಳೆಲ್ಲಾ ಕಟ್ ಆಗಿ ಬಸ್ಸುಗಳು ತಿರುಗಾಡಲು ಆಗದಿರುವಂಥ ಪರಿಸ್ಥಿತಿ ಬಂದಿದೆ. ಅದೇ ರೀತಿ ಸುಮಾರು 250 ಕುರಿಗಳು ಆ ಹಳ್ಳಕ್ಕೆ ಬಡಿದುಕೊಂಡು ಹೋಗಿದೆ. ಇವತ್ತು ಆ ಕುಟುಂಬದವರು ಬೀದಿಪಾಲಾಗಿದ್ದಾರೆ. ಮಾನ್ಯ ಜಿಲ್ಲಾಧಿಕಾರಿಗಳನ್ನು ವಿಚಾರ ಮಾಡಿದರೆ ಅದು ಸಿಕ್ಕಿದರೆ ಮಾತ್ರ ಪರಿಹಾರ ಕೊಡಲು ಸಾಧ್ಯ ಇಲ್ಲದಿದ್ದರೆ ಇಲ್ಲವೆಂದು ಹೇಳುತ್ತಿದ್ದಾರೆ. ಇಡೀ ಕಗ್ಗಲ್ ಗ್ರಾಮದವರೇ ಹೇಳುತ್ತಿದ್ದಾರೆ, 250 ಕುರಿಗಳು ಹೋಗಿದೆ ಎಂದು. ದಯವಿಟ್ಟು ಮಾನ್ಯ ಕಂದಾಯ ಮಂತ್ರಿಗಳನ್ನು ಕೋರುತ್ತಿದ್ದೇನೆ, ದಯವಿಟ್ಟು 250 ಕುರಿಗಳು ಏನು ಬಡಿದುಕೊಂಡು ಹೋಗಿದೆ, ಅವರಿಗೆ ಪರಿಹಾರಧನ ಕೊಡಬೇಕು ಮತ್ತು ರಸ್ತೆ ರಿಪೇರಿಯನ್ನು ಮಾಡಿಸಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಕಂದಾಯ ಮಂತ್ರಿಗಳನ್ನು ಒತ್ತಾಯ ಮಾಡುತ್ತಿದ್ದೇನೆ.

ಶ್ರೀ ಕೆ. ರಘುಪತಿಭಟ್ (ಉಡುಪಿ) : ಮಾನ್ಯ ಉಪಾಧ್ಯಕ್ಷರೆ, ನಮ್ಮ ಉಡುಪಿ ಜಿಲ್ಲೆಯಲ್ಲಿ ಬೇರೆ ಜಿಲ್ಲೆಯಂತೆ ಮಳೆಯಲ್ಲ. ನಮ್ಮ ಜಿಲ್ಲೆಯಲ್ಲಿ ಮಳೆ ಜಾಸ್ತಿಯಾಗಿ ತುಂಬ ಹಾನಿಯಾಗುತ್ತದೆ. ತಮಗೂ ವರದಿ ಬಂದಿರಬಹುದು. ಉಡುಪಿ ಕ್ಷೇತ್ರದಲ್ಲಿ ನೆರೆ ವಿಪರೀತವಾಗಿ ರವಿ ಪೂಜಾರಿ ಎಂಬುವವರು ಪ್ರಾಣವನ್ನು ನೆರೆಯಲ್ಲಿ ಹೋದಂಥ ಸಂದರ್ಭದಲ್ಲಿ ಕಳೆದುಕೊಂಡಿದ್ದಾರೆ. ನಮ್ಮಲ್ಲಿ ಇವತ್ತು ಮರಮುಟ್ಟು ಜಾಸ್ತಿ ಇದ್ದು ಮನೆಗಳು ಜಾಸ್ತಿ ಇರುವುದರಿಂದ ಮರ ಬಿದ್ದು ಕೆಲವು ಮನೆಗಳು ನಾಶವಾಗಿದೆ. ನಮ್ಮ ಸಮಸ್ಯೆ ಏನೆಂದರೆ ಮರ ಬಿದ್ದು ಭಾಗಶಃ ಮನೆ ಹಾನಿಯಾದರೆ, ಇಡೀ ಮಾಡೆಲ್ಲಾ ಹಾನಿಯಾಗಿದ್ದರೆ ಕನಿಷ್ಟ ಐವತ್ತು ಸಾವಿರ ಖರ್ಚಾದರೆ ನಮ್ಮ ತಹಶೀಲ್ದಾರರ ಆದೇಶ ಇರುವಂಥದ್ದು ಏನೆಂದರೆ ಎರಡು ಸಾವಿರ ರೂ ಮಾತ್ರ ಕೊಡಲಿಕ್ಕೆ ಎಂದು, ಪೂರ್ತಿ ಮನೆ ಬಿದ್ದು ಹೋದರೆ ಹತ್ತು ಸಾವಿರ ರೂ. ಕೊಡುವಂಥದ್ದು ಎಂದು ಹೇಳುತ್ತಿದ್ದಾರೆ. ನಿನ್ನೆ ನಾನು ಹೋದಂಥ ಸಂದರ್ಭದಲ್ಲಿ ಕೆಳಾರ್ಕಳಬಿಟ್ಟು ಎಂಬಲ್ಲಿ ಪರಿಶಿಷ್ಟ ಜಾತಿಯ ಮನೆಯವರ ಮಾಡಿನ ಮೇಲೆ ಗಾಳಿಯಿಂದ ಮರ ಬಿದ್ದು ನುಜ್ಜಾಗಿದೆ. ತಹಶೀಲ್ದಾರರು ಕೇವಲ ಎರಡು ಸಾವಿರ ರೂ ಮಾತ್ರ ಕೊಡಲು ನಿಯಮಾವಳಿ ಇರುವುದು ಎಂದು ಹೇಳುತ್ತಾರೆ. ಭಾಗಶಃಕ್ಕೆ ಎರಡು ಸಾವಿರ

ರೂ ಮಾತ್ರ ಕೊಡಲು ಇದೆ ಎಂದು, ಮಾಡು ಬಿದ್ದರೆ ಕನಿಷ್ಟ 30 ರಿಂದ 40 ಸಾವಿರ ರೂ ಖರ್ಚು ಇದೆ, ಇದಕ್ಕೆ ಸರ್ಕಾರ ಸ್ವಲ್ಪ ನಿಯಮಾವಳಿಗೆ ಸಡಿಲಿಸಬೇಕು. ಕನಿಷ್ಟ ಮಾಡು ಬಿದ್ದಂಥ ಸಂದರ್ಭದಲ್ಲಿ ಹತ್ತು ಸಾವಿರ ರೂ. ವಾದರೂ ಕೊಡುವಂಥದ್ದು ಪೂರ್ತಿ ಮನೆಬಿದ್ದಾಗ ಇಪ್ಪತ್ತು ಸಾವಿರ ರೂ. ಕೊಡಲು ಮಾಡಬೇಕು. ಉಡುಪಿ ಜಿಲ್ಲೆಗೆ ಈಗ ಒಂದು ಕೋಟಿ ರೂ ಬಿಡುಗಡೆಮಾಡಿದ್ದೀರಿ, ಕನಿಷ್ಟ ತಕ್ಷಣಕ್ಕೆ ಆರು ಕೋಟಿಯಾದರೂ ಬಿಡುಗಡೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಚಿಕ್ಕನಗೌಡ್ರು ಸಿದ್ದನಗೌಡ ಈಶ್ವರಗೌಡ (ಕಲಕಗಟಗಿ) : ಮಾನ್ಯ ಅಧ್ಯಕ್ಷರೆ ನಮ್ಮ ಕ್ಷೇತ್ರದಲ್ಲಿ ಮಂಟೂರು ಗ್ರಾಮವೆಂದು ತಮಗೆ ಗೊತ್ತಿದೆ. ಏಕೆಂದರೆ ಒಂದೇ ಗ್ರಾಮದಲ್ಲಿ ನಾಲ್ಕು ಮಕ್ಕಳು, ಎರಡು ಗಂಡು, ಎರಡು ಹೆಣ್ಣು ಒಬ್ಬ ತಾಯಿ ಒಟ್ಟು ಐದು ಮಂದಿ ಒಂದು ಮನೆಯಲ್ಲಿ ತೀರಿಕೊಂಡಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಬೆಣ್ಣೆಹಳ್ಳವೆಂದು ಒಂದು ಹಳ್ಳ ಇದೆ. ಹಳ್ಳದ ಪಕ್ಕದಲ್ಲಿ ಬರತಕ್ಕಂಥ ಬಂಡಿಹಳ್ಳ ಸಿರಗುಪ್ಪಿ ಒಂದು ಮನೆಯೊಳಗೆ ಐದು ಮಂದಿ ತೀರಿಕೊಂಡಿದ್ದಾರೆ. ಅದಕ್ಕೆ ತಮ್ಮ ಮೂಲಕ ಅವರನ್ನು ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಹೆಚ್ಚಿನ ಪರಿಹಾರ ಅವರಿಗೆ ಕೊಡಬೇಕು. ಇವತ್ತು ನಾನು ಜಿಲ್ಲಾಧಿಕಾರಿಯವರ ಮುಖಾಂತರ ಲಿಸ್ಟ್ ತೆಗೆದುಕೊಂಡು ಬಂದಿದ್ದೇನೆ. ನೀವು ಎಷ್ಟು ಕೊಟ್ಟಿದ್ದೀರಿ ಎಂದರೆ ನಲವತ್ತು ಸಾವಿರ ರೂಪಾಯಿತ. ಮನೆ ಬಿದ್ದಂಥದ್ದು 1052. ಅಲ್ಲಿ ಪರಿಹಾರ ಕೊಟ್ಟಂಥದ್ದು 42 ಸಾವಿರ ರೂ. ಕಡಿಮೆ ಎಂದರೂ ಒಂದೂ ಒಂದೂವರೆ ಕೋಟಿ ರೂ. ಕೊಡಬೇಕಾದಂಥ ಅನುದಾನಕ್ಕೆ ಕೇವಲ ನಲವತ್ತು ಸಾವಿರ ಕೊಟ್ಟರೆ ಹೇಗೆ? 1055 ಮನೆಗಳು ಇದೆ, ಅದಕ್ಕಾಗಿ ಹೆಚ್ಚಿನ ಪರಿಹಾರವನ್ನು ನಮ್ಮ ಕ್ಷೇತ್ರಕ್ಕೆ ಕೊಡಿ ಎಂದು ತಮ್ಮ ಮೂಲಕ ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್(ಕಂದಾಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಪ್ರಕೃತಿ ವಿಕೋಪದ ಮುಂದೆ ಮತ್ತು ಅನೇಕ ಸಂದರ್ಭದಲ್ಲಿ ಒಂದೊಂದು ಸಂದರ್ಭದಲ್ಲಿ ಮಾನ್ಯ ಕೃಷಿ ಸಚಿವರು ಹೇಳಿದಂತೆ ಒಂದು ಕಡೆಗೆ ಅತಿವೃಷ್ಟಿ ಮತ್ತೊಂದು ಕಡೆಗೆ ಬರಗಾಲ, ಕೋಲಾರದಲ್ಲಿ ಮಳೆಯೇ ಬರಲಾರದಂಥ ಪರಿಸ್ಥಿತಿ. ಯಾವುದೋ ಒಂದು ಊರಿನಲ್ಲಿ ಬಿದ್ದುಹೋಗಿರತಕ್ಕದನ್ನೂ ಕೂಡ ಹೇಳಿದರು. ಅಂದರೆ ಈ ವೈಚಿತ್ರದ ಮುಂದೆ ಮಾನವ ಹುಲುಮಾನವನಾಗಿರುತ್ತಾನೆ. ಇಂಥ ಒಂದು ಸನ್ನಿವೇಶದಲ್ಲಿ ನಮ್ಮ ಸರ್ಕಾರ ತನ್ನ ಇತಿಮಿತಿಗಳಲ್ಲಿ ಸಂಕಷ್ಟಕ್ಕೆ ಒಳಗಾಗಿರತಕ್ಕಂಥ ಪ್ರತಿಯೊಬ್ಬರಿಗೂ ಕೂಡ ಸಹಾಯ ಮಾಡೇ ಮಾಡಬೇಕು, ಅದಕ್ಕೆ ಇಂತಿಷ್ಟೇ ಹಣ ಎನ್ನತಕ್ಕ ಪ್ರಶ್ನೆ ಇಲ್ಲ, ಸಂಕಷ್ಟಕ್ಕೆ ಒಳಗಾಗಿರತಕ್ಕ ಪ್ರತಿಯೊಬ್ಬರಿಗೂ ಕೂಡ ಬೇರೆ ಬೇರೆ ಸಂಪನ್ಮೂಲಗಳು ಇರತಕ್ಕಂಥದನ್ನು ಅಲ್ಲಿಗೆ ಬದಲಿಸಿ ಕ್ರಮ ಕೈಗೊಳ್ಳಬೇಕೆಂದು ಹೇಳಿದ್ದೇವೆ. ಈಗಾಗಲೇ ಮಾನ್ಯ ಆಲ್ಕೋಡ್ ಹನುಮಂತಪ್ಪನವರು ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿದನೆಲ್ಲಾ ಹೇಳಿದರು. ಸುಮಾರು ನಮಗೆ ಬಂದಿರತಕ್ಕ ವರದಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ 81 ಗ್ರಾಮಗಳು. ಬಾಗಲಕೋಟೆ ಜಿಲ್ಲೆಯಲ್ಲಿ 22 ಗ್ರಾಮಗಳು, ಗುಲ್ಬರ್ಗಾ ಜಿಲ್ಲೆಯಲ್ಲಿ 20 ಗ್ರಾಮಗಳು, ಬಿಜಾಪುರ ಜಿಲ್ಲೆಯಲ್ಲಿ 2 ಗ್ರಾಮಗಳು ಹಾಗೂ ರಾಯಚೂರು ಜಿಲ್ಲೆಯಲ್ಲಿ 7 ಗ್ರಾಮಗಳು, ಸಂಪೂರ್ಣವಾಗಿ ಜಲಾವೃತವಾಗಿ ಪ್ರವಾಹದ ಸಂಕಷ್ಟಕ್ಕೆ ಗುರಿಯಾಗಿರತಕ್ಕದ್ದು ಇದೆ. ಕಡಿಮೆ ಕೊಟ್ಟಿರುವ ಬಗ್ಗೆ ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದರು. 1 ಕೋಟಿ ರೂ ಕೊಟ್ಟಿರತಕ್ಕದ್ದು 28ರಂದು, ವಿಪರೀತ ಮಳೆ ಬಂದಿರತಕ್ಕದ್ದು ಇತ್ತೀಚಿನ 2–3 ದಿವಸಗಳಿಂದ ಆಗಿದೆ. ಆದ್ದರಿಂದ ತಮಗೆ ಕೊಟ್ಟಿರತಕ್ಕ ಹಣ

ಸಾಲಾದು ಎಂಬುದು ಸರ್ಕಾರಕ್ಕೆ ಕೂಡ ಗೊತ್ತಿದೆ. ನಾವು 4–5 ಕೋಟಿ ರೂ. ಈ ರೀತಿ ಕೊಟ್ಟರೂ ಕೂಡ ಬಹಳ ಕಡಿಮೆ ಆಗಿರತಕ್ಕಂಥ ಮೊತ್ತವಾಗಿರುವುದರಿಂದ ಅದನ್ನು ಪುನರ್ವಿಮರ್ಷೆ ಕಾಲಕಾಲಕ್ಕೆ ವರದಿಗಳು ಬಂದಂತೆ. ನಾವು ಮಾಡುತ್ತಲೇ ಇರುತ್ತೇವೆ. ಆದರೆ ಈಗ ನಾವು ಜರೂರಾಗಿ ಮಾಡಬೇಕಾದಂಥ ಕೆಲಸಗಳೇನಿದೆ ಈ ಎಲ್ಲಾ ಗ್ರಾಮಗಳಿಗೆ ಸಂಬಂಧಪಟ್ಟಂತೆ ನಾವೆಗಳನ್ನು ಕಳುಹಿಸಿ ಜಲಾವೃತ್ತದಿಂದ ಒಳಗಾಗಿರತಕ್ಕಂಥ ಗ್ರಾಮಗಳ ನಿವಾಸಿಗಳಿಗೆ ಔಷಧ, ಆಹಾರಧಾನ್ಯ, ಸುರಕ್ಷಿತವಾದಂಥ ಕುಡಿಯುವ ನೀರನ್ನು ಕಳುಹಿಸಿಕೊಡತಕ್ಕದ್ದು ಮೊದಲನೆಯ ನಮ್ಮ ಕೆಲಸ. ಎಲ್ಲೆಲ್ಲಿ ಸಾಧ್ಯವಿದೆ ಅಲ್ಲಿ ವಾಪಸ್ ಪುನರ್ನಿವೇಶನ ಮಾಡತಕ್ಕದ್ದರ ಕಡೆಗೆ ಕೂಡ ಪ್ರಯತ್ನ ಮಾಡುತ್ತಿದ್ದೇವೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಹ ಬಂದಿರತಕ್ಕದ್ದನ್ನು ನಾವು ಒಂದು ವೇಳೆ ಒಪ್ಪಿಕೊಳ್ಳುವುದಾಗಿದ್ದರೂ ಕೂಡ ಬಾಗಲಕೋಟೆ, ರಾಯಚೂರು ಮೊದಲಾಗಿರತಕ್ಕ ಜಿಲ್ಲೆಗಳಲ್ಲಿ ಬಂದಿರತಕ್ಕದ್ದು ಮಹಾರಾಷ್ಟ್ರದಲ್ಲಾದ ಮಳೆಯಿಂದ; ಅವರು ವಿಪರೀತವಾದಂಥ ನೀರನ್ನು, ಯಾರೂ ಊಹೆ ಮಾಡಲು ಸಾಧ್ಯವಿಲ್ಲದೇ ರೀತಿಯಲ್ಲಿ 3 ಲಕ್ಷ ಕ್ಯೂಸೆಕ್ಸ್‌ನ ನೀರನ್ನು ಏಕಾಏಕಿ ಕಳುಹಿಸಿಕೊಟ್ಟಿರತಕ್ಕದ್ದು. ಎಲ್ಲಾ ಜಲಾಶಯಗಳಿಂದ ನೀರನ್ನು ಬಿಟ್ಟಿರತಕ್ಕಂಥ ಕಾರಣ ಆಗಿರುವುದರಿಂದ, ಇಡೀ ಬೆಳೆ ಹಾನಿಯಾಗತಕ್ಕಂಥದ್ದು, ನದಿ ಪಾತ್ರದ ಎಲ್ಲಾ ದಂಡೆಗಳ ಮೇಲೆ ಇರತಕ್ಕಂಥ ಹಳ್ಳಿಗಳು ತೊಂದರೆಗೆ ಒಳಗಾಗಿವೆ. ಕೋಟ್ಯಾಂತರ ರೂಪಾಯಿಗಳ ಬೆಳೆ ಹಾನಿಯಾಗಿದೆ. ಎಲ್ಲಾ ಜಿಲ್ಲಾಧಿಕಾರಿಗಳಿಗೂ ಕೂಡ ಆಗಿರತಕ್ಕಂಥ ನಷ್ಟದ ಬಗ್ಗೆ ವರದಿಯನ್ನು ಕಳುಹಿಸಿಕೊಡುತ್ತಿದ್ದಾರೆ. ಅವರು ಕಳುಹಿಸಿಕೊಟ್ಟಿರತಕ್ಕಂಥ ವರದಿ, ಅವತ್ತಿಗೆ ಪೂರ್ತಿಯಾಗಿರುತ್ತದೆಯೇ ವಿನಃ ಮತ್ತೆ ಎರಡನೇ ದಿವಸ, ಮೂರನೇ ದಿವಸ ಆಗಿರತಕ್ಕಂಥ ಹಾನಿಗೆ ಸಂಬಂಧಪಟ್ಟಂತೆ ಇರುವುದಿಲ್ಲ. ಆದ್ದರಿಂದ, ಎಲ್ಲಾ ಜಿಲ್ಲಾಧಿಕಾರಿಗಳಿಗೆ ಹೇಳಿದ್ದೇವೆ, ನಿಮ್ಮಲ್ಲಿ ಇರತಕ್ಕಂಥ P.D. account ನ ದುಡ್ಡು ಅದರೂ ಆಗಬಹುದು, ಅಥವಾ ಬೇರೆ ಇಲಾಖೆಗೆ ಕೊಡಬೇಕಾದಂತಹ ದುಡ್ಡು ಆದರೂ ಇರಬಹುದು, ಈಗ ನಿಮಗೆ ಹೇಳಬೇಕೆಂದರೆ, ಕುಡಿಯುವ ನೀರಿಗೆ ಆದ್ಯತೆ ಎಂದು ಹೇಗೆ ಮಾಡಿರುತ್ತೇವೋ, ಆ ಕುಡಿಯುವ ನೀರಿಗಾಗಿ ಬೇರೆ ಇಲಾಖೆಗೆ ಒದಗಿಸಿರತಕ್ಕಂಥ ಹಣವನ್ನು ತಾತ್ಕಾಲಿಕವಾಗಿ ನೀವು ಅದನ್ನು ಕುಡಿಯುವ ನೀರಿಗೆ ಉಪಯೋಗಿಸಬಹುದು ಎಂಬ ರೀತಿಯಲ್ಲಿ ಪ್ರವಾಹ ಪೀಡಿತ ಪ್ರದೇಶದಿಂದ ಸಂಕಷ್ಟಕ್ಕೆ ಒಳಗಾಗಿರತಕ್ಕಂಥ ಪ್ರತಿಯೊಬ್ಬರಿಗೂ ಕೂಡ ನೀವು ಪರಿಹಾರವನ್ನು ಕಲ್ಪಿಸಿಕೊಡಬೇಕೆಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿರತಕ್ಕಂಥದ್ದರ ಜೊತೆಗೆ, ಪ್ರತಿ ಈ ಪ್ರವಾಹ ಪೀಡಿತ ಪ್ರದೇಶಗಳ ಸಂಕಷ್ಟಕ್ಕೆ ಒಳಗಾಗಿರುವಂತಹ ಜಿಲ್ಲೆಗಳಿಗೆ ಯಾರ್ಯಾರನ್ನು nodal officers ಎಂದು, ಹಿರಿಯ ಅಧಿಕಾರಿಗಳಾದ ಕಾರ್ಯದರ್ಶಿಗಳನ್ನು ನಾವು ನೇಮಕಾತಿ ಮಾಡಿದ್ದೇವೋ, ಅವರು ಈ ಕೂಡಲೇ ಆಯಾ ಕ್ಷೇತ್ರಕ್ಕೆ ಹೋಗಿ, ಅಲ್ಲಿಯೇ ತಾವು ಮೊಕ್ಕಾಂ ಅನ್ನು ಮಾಡಬೇಕು, ಅಲ್ಲಿಯೇ ಪರಿಹಾರದ ವಿಚಾರಗಳಲ್ಲಿ ಸಂಪೂರ್ಣವಾದಂತಹ ನಿರ್ದೇಶನಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡು ಕೊಡತಕ್ಕಂಥ ಕೆಲಸ ಮಾಡಬೇಕೆಂದು ಮಾನ್ಯ ಮಂತ್ರಿಗಳು ಆದೇಶವನ್ನು ಈ ದಿವಸ ಬೆಳಿಗ್ಗೆಯೇ ಕೊಟ್ಟಿದ್ದಾರೆ. ಎಲ್ಲರೂ ಆಯಾ ಜಿಲ್ಲೆಗಳಿಗೆ ಈಗಾಗಲೇ ಹೊರಟಿದ್ದಾರೆ. ಕಂದಾಯ ಇಲಾಖೆಯ ಕಾರ್ಯದರ್ಶಿಗಳು ಈಗಾಗಲೇ ಬೆಳಗಾವಿಗೆ ಹೋಗಿದ್ದಾರೆ. ನಾವು ಇದರ ವಿಚಾರ ಚರ್ಚೆ ಮಾಡುವುದಕ್ಕಿಂತಲೂ ಪೂರ್ವದಲ್ಲಿ ರಕ್ಷಣಾ ಇಲಾಖೆಯವರ ಜೊತೆಗೆ ಮಾತನಾಡಿದ ಮೇಲೆ, ಅವರು ಈಗಾಗಲೇ ಎರಡು ಹೆಲಿಕಾಪ್ಟರ್‌ಗಳನ್ನು ಕಳುಹಿಸಿಕೊಟ್ಟಿದ್ದಾರೆ. ಸೈನಿಕರನ್ನೂ ಕೂಡ ಕಳುಹಿಸಿಕೊಟ್ಟಿರತಕ್ಕಂಥದ್ದು ಇದೆ. ತಾವು ಹೇಳಿದಿರಿ. ಈಗ ಬೀಳಗಿ ಮೊದಲಾದ ಪ್ರದೇಶಗಳಲ್ಲಿ ಆಗಿರತಕ್ಕಂಥ ಆನಾಹುತದ ಬಗ್ಗೆ ಸರ್ಕಾರ ನಿರ್ಲಕ್ಷತನದಿಂದ ಇದೆ ಎನ್ನತಕ್ಕಂಥ ಮಾತನ್ನು ಹೇಳಬಾರದು. ದಯವಿಟ್ಟು ತಾವು ಈ ಸಂದರ್ಭದಲ್ಲಿ ಯೋಚನೆಯನ್ನು ಮಾಡಬೇಕು.

ನಮ್ಮ ಕೈಯಲ್ಲಿ ನಿಲ್ಲಿಸಲು ಸಾಧ್ಯವಿಲ್ಲದಂತಹ ಕೆಲಸವೂ ಆಗುತ್ತದೆ. ಸುನಾಮಿ ಬಂತು, ಅದು ಯಾರು ಯೋಚನೆ ಮಾಡದೇ ಇರತಕ್ಕಂಥದ್ದು, ಅದರೆ ಆ ಸುನಾಮಿ ಮಾಡಿರತಕ್ಕಂಥದ್ದನ್ನು, ಇವತ್ತು ತತ್‌ಕ್ಷಣದಲ್ಲಿ ಏನೇನು ಕಾರ್ಯಭಾರವನ್ನು ಮಾಡಬೇಕಾಗಿರುತ್ತದೋ ಅದಕ್ಕೆ ಸ್ಪಂದಿಸಿದ್ದೇವೆ. ನಿಮ್ಮ ಸಂಕಷ್ಟಗಳಿಗೆ ನಾವು ಇಲ್ಲಿ ಕೊಡತಕ್ಕಂಥ ಪರಿಹಾರ, ಏನೇನೂ ಪರಿಹಾರ ಅಲ್ಲ. ಇವತ್ತು ಕಷ್ಟದಲ್ಲಿದ್ದವರಿಗೆ, ಗುಡಿಸಲು ಬಿತ್ತು ಎಂದು ತಾವು ಹೇಳಿದಿರಿ, ಗಾಳಿ ಜೋರಾಗಿ ಬೀಸುತ್ತಿದೆ. ಅವರಿಗೆ ಹೊದ್ದುಕೊಳ್ಳಿಲಿಕ್ಕೂ ಕೂಡ ಯಾವುದೇ ತರಹದ ಅನುಕೂಲತೆಗಳಿಲ್ಲ, ಇಂತಹದ್ದೆಲ್ಲವನ್ನೂ ತಾವು ಹೇಳಿದ್ದೀರಿ. ಅದಕ್ಕೆ ಎಲ್ಲಾ ಪೂರಕವಾಗಿರತಕ್ಕಂಥ ಕೆಲಸ ಕಾರ್ಯಗಳನ್ನು ಮಾಡತಕ್ಕಂಥ ಸಿದ್ದತೆಯನ್ನು ನಾವು ಈಗಾಗಲೇ ಮಾಡಿದ್ದೇವೆ. ಈಗ ಮತ್ತೆ 8 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಿಕ್ಕೆ ಆರ್ಥಿಕ ಇಲಾಖೆಗೆ ನಾನು ಕಳುಹಿಸಿಕೊಟ್ಟಿದ್ದೇನೆ. ಆ 8 ಕೋಟಿ ರೂಪಾಯಿಗಳು ಈ ದಿವಸ ಸಾಯಂಕಾಲ ಅಥವಾ ನಾಳೆ ಬೆಳಿಗ್ಗೆ ಬಿಡುಗಡೆ ಮಾಡತಕ್ಕಂಥದ್ದನ್ನು ಮಾಡುತ್ತೇವೆ. ಮತ್ತೆ ಬೇರೆ ಬೇರೆ ಸಂದರ್ಭಗಳಲ್ಲಿ ಹಣವನ್ನು ಉಪಯೋಗಿಸಿಕೊಳ್ಳಬೇಕಾಗಿದ್ದರೆ, ಇದಕ್ಕಾಗಿ ಕಾಯಬೇಕಾದಂತಹದ್ದು ಇಲ್ಲ. ಅಲ್ಲಿ ಹೋಗಿರತಕ್ಕಂಥ ಕಾರ್ಯದರ್ಶಿಗಳು ಯಾರಿದ್ದಾರೆ, ಹಿರಿಯ ಅಧಿಕಾರಿಗಳು, ಅವರು ಆ ಕೆಲಸವನ್ನು ಮಾಡಬೇಕು. ನಾನು ಮತ್ತು ಮಾನ್ಯ ಹಿರಿಯ ಸಚಿವರಾದ ಜಲಸಂಪನ್ಮೂಲ ಸಚಿವರಾದಂತಹ ಮಲ್ಲಿಕಾರ್ಜುನ ಖರ್ಗೆಯವರು, ಸನ್ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಹೋಗಿ, ಅಲ್ಲಿರತಕ್ಕಂಥ ವಸ್ತುಸ್ಥಿತಿಯನ್ನು ಕಣ್ಣಾರೆ ಕಂಡು, ಅಲ್ಲಿ ಆಗಲೇ ಬೇಕಾಗಿರತಕ್ಕಂಥ ಕೆಲಸ ಕಾರ್ಯಗಳಿಗೆ ತತ್‌ಕ್ಷಣ ಸ್ಥಳದಲ್ಲಿಯೇ ಆದೇಶವನ್ನು ಮಾಡತಕ್ಕಂಥ ಕೆಲಸವನ್ನು ನಾವು ಕೈಗೊಳ್ಳುತ್ತೇವೆ. ತಮ್ಮೆಲ್ಲಾ ಭಾವನೆಗಳಿಗೂ ಕೂಡ ಈ ಸರ್ಕಾರ ಸ್ಪಂದಿಸುತ್ತದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈಗಾಗಲೇ ಮಾನ್ಯ ಶ್ರೀನಿವಾಸಗೌಡರು ಉತ್ತರ ಕೊಟ್ಟಿದ್ದಾರೆ. ಇಡೀ ಜಿಲ್ಲೆಗೆ ಮತ್ತು ನಿಮ್ಮ ತಾಲ್ಲೂಕಿನಲ್ಲಿ ಮಳೆ ಬಂದಿಲ್ಲ. ಆದರೆ ಒಂದು ಊರಿಗೆ ಮಳೆ ಬಂದಿದೆ, ಬಂದಿರತಕ್ಕಂಥದ್ದು ವರವಾಗಿ ಬರದೆ ಶಾಪವಾಗಿ ಬಂದಿದೆ, ಅದು ವರವಾಗಿ ಬರಬೇಕಾಗಿತ್ತು. ಆದರೆ ಶಾಪವಾಗಿ ಆಗಿದೆ. ಈಗಾಗಲೇ ನಿಯಮಾವಳಿಗೆ ಅನುಗುಣವಾದಂತಹ ರೀತಿಯಲ್ಲಿ ಪರಿಹಾರವನ್ನು ನಾವು ಕೊಟ್ಟಿದ್ದೇವೆ. ಮನೆಗಳಿಗೆ ತೊಂದರೆ ಆಗಿರತಕ್ಕಂಥವರಿಗೆ ಆರೂವರೆ ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಉಳಿದಂತಹವರಿಗೆ 1200 ರೂ ಈ ತರಹದಲ್ಲಿ ಏನು ಮಾರ್ಗಸೂಚಿ ಇದೆ. ಆ ಮಾರ್ಗಸೂಚಿಯ ಪ್ರಕಾರ ನಾವು ಕೊಟ್ಟಿದ್ದೇವೆ. ಈಗಾಗಲೇ ತಮಗೆ ಅನೇಕ ಸಂದರ್ಭಗಳಲ್ಲಿ ಈ ಸದನದಲ್ಲಿ ಅರಿಕೆ ಮಾಡಿ ಕೊಂಡಿದ್ದೇನೆ. ಅದೇನೆಂದರೆ, ಕೇಂದ್ರ ಸರ್ಕಾರ ಸೂಚಿಸಿರತಕ್ಕಂಥ ಮಾರ್ಗಸೂಚಿಗಳು ಅನೇಕ ಬಾರಿ ಅವೈಜ್ಞಾನಿಕವಾಗಿವೆ, ಅವಾಸ್ತವವಾಗಿಯೂ ಇವೆ. ಆಗಿರುವಂತಹ ನಷ್ಟಕ್ಕೂ ನಾವು ಕೊಡುವಂತಹ ಪರಿಹಾರಕ್ಕೂ ಯಾವುದೇ ತರಹವಾದಂತಹ ಸಂಬಂಧ ಇರುವುದಿಲ್ಲ. ಆದರೆ ತತ್‌ಕ್ಷಣದಲ್ಲಿ ಅವರ ಸಹಾಯಕ್ಕೆ ಬರಬೇಕಾಗಿರತಕ್ಕಂಥದರ ಬಗ್ಗೆ ಮಾನ್ಯ ಅನೇಕ ಸದಸ್ಯರು ಹೇಳಿದ್ದೀರಿ, ಈಗ ಅವರಿಗೆ ಬೇಕಾಗಿರತಕ್ಕಂಥ ಔಷಧ, ಆಹಾರಧಾನ್ಯ ಅವರಿಗೆ ಬೇಕಾಗಿರತಕ್ಕಂಥ ಬಟ್ಟೆ ಬರೆ ಮತ್ತು ಸುರಕ್ಷಿತವಾಗಿ ಅವರು ಇರಬೇಕಾದಂತಹ ಕೆಲಸ ಏನಿದೆ. ಅದನ್ನು ಮಾಡುತ್ತಿದ್ದೇವೆ.ಮಲೆನಾಡಿನ ಪ್ರದೇಶಗಳಲ್ಲಿ ಯಾವಾಗಲೂ ಧಾರಾಕಾರವಾಗಿ ಮಳೆ ಸುರಿಯುತ್ತದೆ. ಅದು ನಿರೀಕ್ಷೆಗೆ ಮೀರಿರತಕ್ಕಂಥದ್ದು ಆಗಿರುವುದರಿಂದ, ಅದರ ಬಗ್ಗೆಯೂ ಕೂಡ ಪೂರ್ಣವಾಗಿ ಕ್ರಮ ಕೈಗೊಳ್ಳಬೇಕು ಎಂದು ಈಗ ಆದೇಶ ಕೊಟ್ಟಿದ್ದೇವೆ. ನಾಳೆ ಅಲ್ಲಿ ಕುಳಿತುಕೊಂಡು ಸ್ಥಳೀಯವಾಗಿ ಆದೇಶ ಕೊಟ್ಟ ನಂತರ, ಮುಂದಿನ ಬೆಳವಣಿಗೆಗೆ

ಬೇಕಾಗಿರತಕ್ಕಂಥ ಎಲ್ಲಾ ವಿಚಾರಗಳನ್ನು ತಮಗೆ ಕೊಡುತ್ತೇನೆ. ಮಹಾರಾಷ್ಟ್ರದಲ್ಲಿ ಸುಮಾರು 900 ಜನ ಸತ್ತಿದ್ದಾರೆ. ಈಗ ಪ್ರತಿಯೊಬ್ಬರಿಗೂ ಉತ್ತರ ಕೊಡುವುದಕ್ಕಾಗುವುದಿಲ್ಲ. ಮಾನ್ಯ ಸಜ್ಜನರವರು ಹೇಳುತ್ತಾರೆ, ನನ್ನ ಊರಿನಲ್ಲಿ 2 ಕೋಟಿ ರೂಪಾಯಿಗಳು ಖರ್ಚಾಗಿದೆ, ನೀವು 3 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಹೇಳುತ್ತಾರೆ. 1 ಕೋಟಿ ರೂಪಾಯಿಗಳನ್ನು ಹಾವೇರಿಗೆ ಬಿಡುಗಡೆ ಮಾಡಬೇಕೆಂದು ಹೇಳಿದ್ದೇನೆ. ಈ ಪ್ರವಾಹ ಪೀಡಿತ ಪ್ರದೇಶಕ್ಕೆ ಸಂಬಂಧಪಟ್ಟ ಹಣದಿಂದಲೇ ಕೊಡಬೇಕೆಂದೇನೂ ಇರುವುದಿಲ್ಲ. ಈಗ ಜಿಲ್ಲಾ ಪಂಚಾಯಿತಿ ಇರುತ್ತದೆ, ಜಿಲ್ಲಾ ಪಂಚಾಯಿತಿಯಿಂದ ಹಣವನ್ನು ಅಲ್ಲಿ ಬಿಡುಗಡೆ ಮಾಡತಕ್ಕಂಥ ಜಿಲ್ಲಾ ಪಂಚಾಯಿತಿಯ ರಸ್ತೆಗಳಿವೆ, ಅದೇ ರೀತಿ ಲೋಕೋಪಯೋಗಿ ಇಲಾಖೆಯ ವಿಚಾರವನ್ನು ತೆಗೆದುಕೊಂಡರೆ, ಅಲ್ಲಿ ಇರತಕ್ಕಂಥ ನಮ್ಮ ಕ್ರಿಯಾ ಯೋಜನೆಗಳನ್ನು ಸ್ವಲ್ಪಮಟ್ಟಿಗೆ ಬದಿಗಿಟ್ಟು, ಅಲ್ಲಿರುವಂತಹ ನಷ್ಟಕ್ಕೆ, ತೊಂದರೆಗೆ ಅಥವಾ ದುರಸ್ತಿಗೆ ಒಳಗಾಗಿರತಕ್ಕಂಥ ಲೋಕೋಪಯೋಗಿ ಇಲಾಖೆಗೂ ಕೂಡ ಹಣವನ್ನು ಬಿಡುಗಡೆ ಮಾಡುತ್ತೇವೆ. ಒಟ್ಟಿನಲ್ಲಿ ಈ ಪ್ರವಾಹ ಪೀಡಿತ, ಈ ಸಂಕಷ್ಟ ಪರಿಹಾರ ನಿಧಿಯಿಂದಲೇ ನಾವು ಎಲ್ಲವನ್ನು ಕೊಡುತ್ತೇವೆ ಎಂದೇನಲ್ಲ, ಬೇರೆ ಬೇರೆ ಇಲಾಖೆಗಳಿಗೆ ಸಂಪನ್ಮೂಲಗಳನ್ನೇನು ಒದಗಿಸಿರುತ್ತೇವೋ, ಅವನ್ನೂ ಕೂಡ ನಾವು ಬದಲಿಸಿ ಆ ಆಜ್ಞೆಯನ್ನು ಕೊಡುತ್ತೇವೆ. ನಿಮ್ಮೆಲ್ಲಾ ಕಾರ್ಯಕ್ರಮಗಳನ್ನು ನಾವು ಖಂಡಿತವಾಗಿಯೂ ಮಾಡುತ್ತೇವೆ. ಒಬ್ಬೊಬ್ಬ ಸದಸ್ಯರೂ ಎತ್ತಿರತಕ್ಕಂಥ ಪ್ರಶ್ನೆಗೆ ಉತ್ತರ ಕೊಡುವುದರ ಬದಲು, ನೀವು ಹೇಳಿರತಕ್ಕಂಥ ಮಾತುಗಳೆಲ್ಲವೂ ಕೂಡ ಸರಿಯಾದುದೇ, ನಿಮ್ಮ ಕಾಳಜಿ ಸರಿಯಾಗಿದಂತಹದ್ದೇ, ಪ್ರತಿಕ್ರಿಯೆ ತೋರಿಸಬೇಕಾಗಿರತಕ್ಕಂಥದ್ದು ನಮ್ಮ ಆದ್ಯ ಕರ್ತವ್ಯವಾಗಿರುವುದರಿಂದ ಸರ್ಕಾರ ನಿಮ್ಮ ನಿರೀಕ್ಷೆಗೆ ಅನುಗುಣವಾದಂತಹ ರೀತಿಯಲ್ಲಿ ಕ್ರಿಯೆಯನ್ನು ತೋರಿಸುತ್ತದೆ ಎನ್ನುವಂತಹ ಮಾತನ್ನು ಹೇಳುತ್ತೇನೆ.

ಉಪಾಧ್ಯಕ್ಷರು : ಮಾನ್ಯ ಕಾರಜೋಳರವರೆ, ಇನ್ನೇನು ಆಯಿತಲ್ಲಾ, ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಟ್ಟರಲ್ಲಾ?

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಉಪಾಧ್ಯಕ್ಷರೇ, ಒಂದು ನಿಮಿಷ. ನಮಲ್ಲಿನ ಚೆನ್ನಾಳ್, ಒಂಟಗೋಡಿ ಮತ್ತು ನಂದಗಾಂವ್ ಗ್ರಾಮಗಳು ಇವತ್ತು ಪದೇ ಪದೇ ಇದೊಂದೇ ಸಲ ಅಲ್ಲ, ಯಾವಾಗ flood ಬರುತ್ತದೋ ಅವಾಗ ಮುಳುಗಡೆಯಾಗುತ್ತಿರುತ್ತವೆ. ಅದಕ್ಕೆ ಅವುಗಳನ್ನು ಶಾಶ್ವತವಾಗಿ ಸ್ಥಳಾಂತರ ಮಾಡಬೇಕೆಂದು ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ಮತ್ತೆ ಅವರಿಗೇನು ನೀವು valuation ಮಾಡಿ land Acquisition ಕೆಳಗಡೆ ಏನೂ compensation ಕೇಳುತ್ತಿಲ್ಲ. ಅವರಿಗೆ 30X40 site, 30-40 ಸಾವಿರ ರೂಪಾಯಿಗಳನ್ನು ಒಂದೊಂದು ಕುಟುಂಬಕ್ಕೆ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಕೊಟ್ಟರೆ, ಅವರು ಹೋಗಲಿಕ್ಕೆ ರೆಡಿ ಇದ್ದಾರೆ. ಅದಕ್ಕಾಗಿ ದಯಮಾಡಿ ಸರ್ಕಾರ ಇದರ ಬಗ್ಗೆ ಏನು ಮಾಡುತ್ತದೆ ಎಂಬುದನ್ನು ಹೇಳಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಉಪಾಧ್ಯಕ್ಷರೆ, ಈ ಎಲ್ಲಾ ವಿಚಾರಗಳೂ ಸಹ ಹಿಂದೆ ನಾವು ಚರ್ಚೆ ಮಾಡಿದ್ದೇವೆ. ಮತ್ತೆ ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಇವತ್ತು ನಿಲುವಳಿ ಸೂಚನೆಯನ್ನು ಕಳುಹಿಸಿಕೊಟ್ಟಿದ್ದಾರೆ. ನಾವು 519.6 ಮೀಟರ್‌ಗಳ ಲೆಕ್ಕಾಚಾರದಲ್ಲಿ ಕೆಲವು ಗ್ರಾಮಗಳು ಮುಳುಗುವುದಿಲ್ಲ. ಅಂತಕ್ಕಂಥದ್ದು ಆಗಿದೆ. ಅದು ಆಗುವುದರೊಳಗಾಗಿಯೇ, ಅದು 524ಕ್ಕೆ ಬರುತ್ತದೆ ಎನ್ನುವಂತಹ ಕಾರಣಕ್ಕಾಗಿಯೇ ಇವತ್ತು ನೋಟೀಸು ಕೊಟ್ಟಿರತಕ್ಕಂಥದ್ದು ಇದೆ. ಅದರ ಬಗ್ಗೆ ಪುನರ್

ವಸತಿ ಕಾರ್ಯಕ್ರಮಗಳನ್ನು ಕೈಗೊಂಡಿಲ್ಲ. ಅದರಿಂದಲೂ ಕೂಡ ಅನೇಕ ಗ್ರಾಮಗಳು ಪುನರ್ ವಸತಿಯಾಗಬೇಕೆಂದು ಹೇಳಿ, ಬೀಳಗಿಯವರು ಮತ್ತು ಬಾಗಲಕೋಟೆಯವರು, ಮತ್ತು ಇನ್ನೂ ಹುನಗುಂದ ತಾಲ್ಲೂಕಿನ ಕೆಲವು ಹಳ್ಳಿಗಳು, ಈ ವಿಚಾರದಲ್ಲಿ ತಾವು ಪ್ರಸ್ತಾಪ ಮಾಡಿದ್ದೀರಿ. ಪುನರ್ ವಸತಿ ಮಾಡಬೇಕಾಗಿರತಕ್ಕಂಥದ್ದಕ್ಕೆ ನಾವು ಮಾಡುತ್ತೇವೆ. ಸುಪ್ರೀಂ ಕೋರ್ಟ್‌ನಲ್ಲಿ 524ಕ್ಕೆ ಕಟ್ಟಬಾರದು ಅನ್ನತಕ್ಕಂಥ ಒಂದು ಆದೇಶ ಮತ್ತು ವಿವಾದ ಅಲ್ಲಿರುವುದರಿಂದ, ನಾವು ಆ ಪ್ರಯತ್ನವನ್ನು ಮಾಡಿರಲಿಲ್ಲ ಅದರೆ ಇವತ್ತು 523 ಮೀಟರ್‌ಗೂ ಕೂಡ ಬಂದು ನಿಂತಿದೆ ಅನ್ನತಕ್ಕಂಥದ್ದನ್ನು ತಾವೂ ಕೂಡ ಹೇಳಿದ್ದೀರಿ. ತಾವು ಇವತ್ತು ಅಲ್ಲಿಯ ಭಾಗದಿಂದ ಬಂದಿರತಕ್ಕಂಥ ಜನ ನಾಯಕರು, ಆದ್ದರಿಂದ ಅಲ್ಲಿರತಕ್ಕಂಥ ವರದಿಯ ಆಧಾರದ ಮೇಲೆ ಮಾನ್ಯ ಜಲ ಸಂಪನ್ಮೂಲ ಮಂತ್ರಿಗಳು, ಅದಕ್ಕೆ ಸಂಬಂಧಪಟ್ಟಂತಹ ಅಧಿಕಾರಿಗಳನ್ನು ಕರೆಸಿ, ಈ ವಿಚಾರದಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿ, ಆದೇಶವನ್ನು ಕೊಡತಕ್ಕಂಥ ಕೆಲಸವನ್ನೂ ಕೂಡ ಮಾಡುತ್ತೇವೆ.

ಶ್ರೀ ಎಂ.ಎಸ್. ಸೋಮಲಿಂಗಪ್ಪ : ಕುರಿಗಳ ಬಗ್ಗೆ ಏನೂ ಎಂದು ಗೊತ್ತಾಗಲಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಜಾನುವಾರುಗಳಿಗೆ ಸಂಬಂಧಪಟ್ಟಂತೆ, 250 ಕುರಿಗಳಿಗೆ, ಪ್ರಕೃತಿ ವಿಕೋಪ ನಿಧಿಯಿಂದ ಕೊಡಬೇಕು ಅನ್ನತಕ್ಕಂಥ ಆದೇಶ ಇಲ್ಲ. ಆದರೆ ಸರ್ಕಾರ ಇದಕ್ಕೆ ನಾವು ಸ್ಪಂದಿಸುತ್ತೇವೆ. ಅದಕ್ಕೂ ಕೂಡ ವರದಿಯನ್ನು ತರಿಸಿಕೊಂಡು ಅವರಿಗೆ ಪರಿಹಾರ ಕೊಡತಕ್ಕಂಥ ಕ್ರಮವನ್ನು ಕೈಗೊಳ್ಳುತ್ತೇವೆ. ಕೇಂದ್ರ ಸರ್ಕಾರದಲ್ಲಿ ಇಲ್ಲದಿದ್ದರೂ ಸಹ, ರಾಜ್ಯ ಸರ್ಕಾರದವತಿಯಿಂದ ಆ ಕೆಲಸವನ್ನು ಮಾಡುತ್ತೇವೆ.

ಉಪಾಧ್ಯಕ್ಷರು : ಈಗ ಸದನವನ್ನು ಮಧ್ಯಾಹ್ನ 3.30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2.08 ಗಂಟೆಗೆ ಮುಂದೂಡಲ್ಪಟ್ಟು ಮತ್ತೆ 3.30ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಿತು)

(ಸದನವು ಮಧ್ಯಾಹ್ನ 4.00 ಗಂಟೆಗೆ ಸಮಾವೇಶಗೊಂಡಿತು, ಮಾನ್ಯ ಅಧ್ಯಕ್ಷರು (ಶ್ರೀ ಕೃಷ್ಣರವರು) ಸಭಾಧ್ಯಕ್ಷರ ಪೀಠವನ್ನಲಂಕರಿಸಿದರು)

ಅಧ್ಯಕ್ಷರು : ಈಗ ಗಮನ ಸೆಳೆಯುವ ಸೂಚನೆಗಳನ್ನು ತೆಗೆದುಕೊಳ್ಳೋಣ.

6. ನಿಲುವಳಿ ಸೂಚನೆ ಮಂಡನೆಗೆ ಅನುಮತಿ ಕೋರಿಕೆ.

ವಿಷಯ : ಬಾಗಲಕೋಟೆಯ ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಿಂದ ಪ್ರದೇಶಗಳಿಗೆ ಸರಿಯಾದ ಅನುಕೂಲತೆಗಳನ್ನು ಮಾಡಿಕೊಡುವ ಬಾಗಲಕೋಟೆ ಪ್ಯಾಕೇಜ್ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ, ಬೆಳಿಗ್ಗೆ ನಿಲುವಳಿ ಸೂಚನೆಯ ಬಗ್ಗೆ ಪ್ರಸ್ತಾಪ ಮಾಡಿದಾಗ, ಮಾನ್ಯ ಮುಖ್ಯಮಂತ್ರಿಯವರು ಬೇರೆ ಯಾವುದೋ ವಿಷಯವನ್ನು ಪ್ರಸ್ತಾಪ ಮಾಡಿದರು. ಇಲ್ಲಿ ಹೆಚ್ಚು ಮಳೆಯಾಗಿ ಅನಾಹುತಗಳು ಆಗಿದೆಯೆಂದು ಚರ್ಚೆಯಾಯಿತು. ಅದಕ್ಕಾಗಿ ನಾನು ಬೆಳಿಗ್ಗೆಯಿಂದ ಪ್ರಸ್ತಾಪ ಮಾಡುತ್ತಿರುವಂಥಾದ್ದು, ಕಳೆದ 4-5 ದಿವಸಗಳಿಂದ ಒಂದಲ್ಲ, ಒಂದು ಕಾರಣಕ್ಕೆ ಇದು ಮುಂದಕ್ಕೆ ಹೋಗುತ್ತಿರುವಂಥಾದ್ದು, ಈಗ ಈ ಬಾಗಲಕೋಟೆಯ ಆಲಮಟ್ಟಿ ಹಿನ್ನೀರಿನಿಂದ ಮುಳುಗಡೆಯಾಗಿರುವಂಥಹ ಪ್ರದೇಶಗಳಿಗೆ ಸರಿಯಾದ ರೀತಿಯ ಅನುಕೂಲತೆಗಳನ್ನು ಮಾಡಿಕೊಡದೇ, ಒಂದು ರೀತಿಯಲ್ಲಿ ಬಾಗಲಕೋಟೆಯು ಹಳೆಯ ಊರು, ಹಾಳು ಕೊಂಪೆಯಾಗಿದೆ. ನವನಗರ ನಾಗರೀಕರಿಗೆ ಸಿಗಬೇಕಾದಂತಹ ಕನಿಷ್ಟ ಸವಲತ್ತುಗಳು ಸಿಗದೇ ಅದು ಹಾಳು